ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

EMAIL : dairyadadaari@gmail.com ಸಂಪುಟ: 01 ಸಂಚಿಕೆ: 95

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795 ಶನಿವಾರ: 21-03-2026



ಸಮಸ್ತ ನಾಡಿನ ಜನತೆಗೆ ಪವಿತ್ರ ರಂಜಾನ್ ಹಬ್ಬದ ಶುಭಾಶಯಗಳು



ಸೈಯದ್ ಅಹ್ಮದ್ ಹುಸೇನಿ ಮತ್ ವಾಲೆ
ಕಾರ್ಯದರ್ಶಿಗಳು : ಮತ್ ವಾಲೆ
ಸಾಹೇಬ್ ಪಬ್ಲಿಕ್ ಸ್ಕೂಲ್ ಮಾನ್ವಿ
ಸಂಪಾದಕರು : ಧೈರ್ಯದ ದಾರಿ ಕನ್ನಡ ದಿನಪತ್ರಿಕೆ



ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ

6360866626


# ವರ್ಗಾವಣೆಯಲ್ಲಿ ಸಿಎಂ ಕಚೇರಿ ಹಸ್ತಕ್ಷೇಪ ಮಾಡುತ್ತಿರುವುದನ್ನು ಗಂಭೀರವಾಗಿ ಪ್ರಶ್ನಿಸಿದ ಹೈಕೋರ್ಟ್

**ಬೆಂಗಳೂರು,ಮಾ.20–** ರಾಜ್ಯ ಸರ್ಕಾರಿ ನೌಕರರ ವರ್ಗಾವಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಸ್ತಕ್ಷೇಪ ಮಾಡುತ್ತಿರುವುದನ್ನು ಹೈಕೋರ್ಟ್ ಗಂಭೀರವಾಗಿ ಪ್ರಶ್ನೆ ಮಾಡಿದೆ. ಸಿಎಂ ಕಚೇರಿಯಿಂದ ವರ್ಗಾವಣೆ ವಿಚಾರವಾಗಿ ಬೆಸ್ಕಾಂನ ಸಹಾಯಕ ಅಭಿಯಂತರ (ಎಇ) ಚೇತನ್ ಎಸ್ ಎಂಬುವವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ನ್ಯಾಯಮೂರ್ತಿಗಳಾದ ಡಿ.ಕೆ.ಸಿಂಗ್ ಹಾಗೂ ಟಿ.ಎಂ.ನದಾಫ್ ಅವರಿದ್ದ ದ್ವಿಸದಸ್ಯ ಪೀಠವು ಗ್ರೂಪ್ ಬಿ ಅಥವಾ ಸಿ ಉದ್ಯೋಗಿಗಳ ವರ್ಗಾವಣೆ ವಿಚಾರದಲ್ಲಿ ಅಸಮಾಧಾನ ಹೊರಹಾಕಿದೆ.

ಸಿಎಂ ಸಿದ್ದರಾಮಯ್ಯಗೆ ನೌಕರರ ವರ್ಗಾವಣೆಗಿಂತ ಮಾಡಬೇಕಾದ ಉತ್ತಮ ಕೆಲಸಗಳಿವೆ. ಸರ್ಕಾರಿ ನೌಕರರ ವರ್ಗಾವಣೆ ವಿಚಾರ ಆಯಾ ಇಲಾಖೆಗೇ ಬಿಡಬೇಕು. ಮುಖ್ಯಮಂತ್ರಿಗಳ ಕಚೇರಿ ವರ್ಗಾವಣೆಯ ಮನವಿ ಸ್ವಿಕರಿಸಬಾರದು ಎಂದು ತರಾಟೆಗೆ ತೆಗೆದುಕೊಂಡಿದ್ದು, ಹೈಕೋರ್ಟ್‌ನ ಈ ಆದೇಶದ ಪ್ರತಿಯನ್ನು ಮುಖ್ಯಮಂತ್ರಿಗೆ ಕಳುಹಿಸಲು ಸೂಚನೆ ನೀಡಿದೆ.



ಪ್ರಕರಣ ಸಂಬಂಧ ಸಿಎಂ ನೀಡುವ ವರ್ಗಾವಣೆ ಶಿಫಾರಸುಗಳ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಯಿಂದಲೂ ನಿಲುವು ಕೇಳಲಾಗಿತ್ತು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ಕಾರ್ಯದರ್ಶಿ, ಸಿಎಂ ಕಚೇರಿಯಿಂದ ನೀಡುವ ಟಿಪ್ಪಣಿಗಳು ಕೇವಲ ಶಿಫಾರಸುಗಳಾಗಿದ್ದು, ಅಂತಿಮ ಆದೇಶವನ್ನು ಸಂಬಂಧಪಟ್ಟ ಇಲಾಖೆ ನೀಡುತ್ತದೆ ಎಂದು ಸ್ಪಷ್ಟಪಡಿಸಿದ್ದರು.ಇಂಧನ ಇಲಾಖೆಯ ಕೆಲವು ಅಧಿಕಾರಿಗಳನ್ನು ವರ್ಗಾವಣೆ ಮಾಡಲು ಸಿಎಂ ಕಚೇರಿ ಮುಂದಾಗಿತ್ತು.

ಸಿಎಂ ಪುತ್ರ ಯತೀಂದ್ರ ಸಿದ್ದರಾಮಯ್ಯ ಇಂಧನ ಇಲಾಖೆ ಆಡಳಿತದಲ್ಲಿ ತೀವ್ರ ಹಸ್ತಕ್ಷೇಪ ಮಾಡುತ್ತಿದ್ದರು. ಇದರಿಂದ ಅಸಮಾಧಾನಗೊಂಡ ಸಚಿವ ಕೆ.ಜೆ.ಜಾರ್ಜ್ ಸಿಎಂ ನಿವಾಸಕ್ಕೆ ತೆರಳಿ ಪ್ರಶ್ನಿಸಿದ್ದರು. ಅಲ್ಲದೇ ರಾಜೀನಾಮೆ ಬಗ್ಗೆ ಸಹ ಪ್ರಸ್ತಾಪಿಸಿದ್ದರು. ಆದರೆ ಸಿಎಂ ಸಿದ್ದರಾಮಯ್ಯ ಜಾರ್ಜ್ ಅವರನ್ನು ಸಮಾಧಾನಪಡಿಸಿದ್ದರು. ಇದು ರಾಜ್ಯ ರಾಜಕಾರಣದಲ್ಲಿ ಸಂಚಲನಕ್ಕೆ ಕಾರಣವಾಗಿತ್ತು.

ಹೀಗೆ ಸಿಎಂ ಪುತ್ರ ಯತೀಂದ್ರ ಸಿದ್ದರಾಮಯ್ಯ ಅವರು ಎಲ್ಲಾ ಇಲಾಖೆಗಳಲ್ಲೂ ಮೂಗು ತೂರಿಸುತ್ತಾರೆ ಎನ್ನುವ ಆರೋಪಗಳು ಕೇಳಿಬರುತ್ತಿವೆ. ಮತ್ತೊಂದೆಡೆ, ಇಂಧನ ಇಲಾಖೆಯ ಅಧಿಕಾರಿಗಳ ವರ್ಗಾವಣೆ ವಿಚಾರದಲ್ಲಿಯೂ ಸಿಎಂ ಕಚೇರಿ ಪಾತ್ರ ವಹಿಸಿದ್ದ ಕುರಿತು ರಾಜಕೀಯ ವಲಯದಲ್ಲಿ ಚರ್ಚೆಗಳು ನಡೆದಿವೆ.ಸಿಎಂ ಪುತ್ರ ಯತೀಂದ್ರ ಸಿದ್ದರಾಮಯ್ಯ ಇಲಾಖೆಗಳ ಕಾರ್ಯಚಟುವಟಿಕೆಯಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂಬ ಆರೋಪಗಳೂ ಕೇಳಿಬಂದಿವೆ.

ಈ ಎಲ್ಲಾ ಬೆಳವಣಿಗೆಗಳ ನಡುವೆ ಹೈಕೋರ್ಟ್ ನೀಡಿದ ಈ ತೀಕ್ಷ್ಣ ಸೂಚನೆ ರಾಜ್ಯ ರಾಜಕೀಯದಲ್ಲಿ ಮತ್ತಷ್ಟು ಚರ್ಚೆಗೆ ಕಾರಣವಾಗಿದೆ.

# ಸಿರವಾರ: ಪದೇ ಪದೇ ವಿದ್ಯುತ್ ವ್ಯತ್ಯಯ – ಜೆಸ್ಕಾಂ ಅಧಿಕಾರಿಗಳಿಗೆ ಮಾನವ ಹಕ್ಕುಗಳ ಪರಿಷತ್ ಮನವಿ



ಧೈರ್ಯದ ದಾರಿ

**ಸಿರವಾರ:** ಪಟ್ಟಣದಲ್ಲಿ ಕಳೆದ ಒಂದು ವಾರದಿಂದ ಪದೇ ಪದೇ ವಿದ್ಯುತ್ ಕಡಿತವಾಗುತ್ತಿರುವುದನ್ನು ಖಂಡಿಸಿ, ಭಾರತೀಯ ಮಾನವ ಹಕ್ಕುಗಳ ಪರಿಷತ್ ವತಿಯಿಂದ ಇಂದು ಜೆಸ್ಕಾಂ (GESCOM) ಇಲಾಖೆಯ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು.ಸಮಸ್ಯೆಯ ವಿವರ:ಸಿರವಾರ ಪಟ್ಟಣದಲ್ಲಿ ಅಸಮರ್ಪಕ ವಿದ್ಯುತ್ ಪೂರೈಕೆಯಿಂದಾಗಿ ಸಾರ್ವಜನಿಕರು, ವಿದ್ಯಾರ್ಥಿಗಳು ಹಾಗೂ ವರ್ತಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಈ ಬಗ್ಗೆ ಸಾರ್ವಜನಿಕ ವಲಯದಲ್ಲಿ ಕೇಳಿಬಂದ ದೂರುಗಳ ಹಿನ್ನೆಲೆಯಲ್ಲಿ ಪರಿಷತ್‌ನ ಪದಾಧಿಕಾರಿಗಳು ಜೆಸ್ಕಾಂ ಕಚೇರಿಗೆ ತೆರಳಿ ಅಧಿಕಾರಿಗಳನ್ನು ಭೇಟಿ ಮಾಡಿ ಸಮಸ್ಯೆ ಸರಿಪಡಿಸುವಂತೆ ಆಗ್ರಹಿಸಿದರು.

**ಅಧಿಕಾರಿಗಳ ತಾಂತ್ರಿಕ ಸ್ಪಷ್ಟನೆ:** ಮನವಿ ಸ್ವೀಕರಿಸಿ ಮಾತನಾಡಿದ ಜೆಸ್ಕಾಂ ಅಧಿಕಾರಿಗಳು, ಕಳೆದ ಒಂದು ವಾರದಿಂದ ಉಂಟಾಗುತ್ತಿರುವ ವಿದ್ಯುತ್ ಅಡಚಣೆಗೆ ತಾಂತ್ರಿಕ ಕಾರಣಗಳನ್ನು ಈ ಕೆಳಗಿನಂತೆ ವಿವರಿಸಿದರು:

**ಹೆಚ್ಚುವರಿ ಟ್ರಾನ್ಸ್‌ಫಾರ್ಮರ್ ಅಳವಡಿಕೆ:** ಸಿರವಾರ ಸಬ್ ಸ್ಟೇಷನ್‌ನಲ್ಲಿ ವಿದ್ಯುತ್ ಸಾಮರ್ಥ್ಯ ಹೆಚ್ಚಿಸಲು ಹೊಸದಾಗಿ 10ಒಗಿಂ ಸಾಮರ್ಥ್ಯದ ಹೆಚ್ಚುವರಿ ಟ್ರಾನ್ಸ್‌ಫಾರ್ಮರ್ ಅನ್ನು ಅಳವಡಿಸಲಾಗಿದೆ.

**ಬ್ರೇಕರ್‌ಗಳ ಅಳವಡಿಕೆ:** ಈ ಹೊಸ ಟ್ರಾನ್ಸ್‌ಫಾರ್ಮರ್‌ಗೆ ಪೂರಕವಾಗಿ ನಾಲ್ಕು ಬ್ರೇಕರ್‌ಗಳನ್ನು ಕೂಡ ಅಳವಡಿಸಲಾಗಿದೆ. ಟೆಸ್ಟಿಂಗ್ ಪ್ರಕ್ರಿಯೆ: ಈ ಹೊಸ ಯಂತ್ರೋಪಕರಣಗಳ ಕಾರ್ಯಕ್ಷಮತೆಯನ್ನು ಪರೀಕ್ಷಿಸುವ (Testing) ಕಾರ್ಯ ನಡೆಯುತ್ತಿದೆ. ಈ ಪರೀಕ್ಷಾರ್ಥ ಪ್ರಯೋಗದ ಸಂದರ್ಭದಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ವಿದ್ಯುತ್ ಸ್ಥಗಿತಗೊಳಿಸುವುದು ಅನಿವಾರ್ಯವಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಈ ಆಧುನೀಕರಣ ಪ್ರಕ್ರಿಯೆ ಪೂರ್ಣಗೊಂಡ ನಂತರ ಪಟ್ಟಣಕ್ಕೆ ಯಾವುದೇ ತಾಂತ್ರಿಕ ಅಡೆತಡೆಯಿಲ್ಲದೆ ನಿರಂತರ ಮತ್ತು ಗುಣಮಟ್ಟದ ವಿದ್ಯುತ್ ಪೂರೈಕೆಯಾಗಲಿದೆ ಎಂದು ಅಧಿಕಾರಿಗಳು ಭರವಸೆ ನೀಡಿದರು.

ಉಪಸ್ಥಿತಿ:ಈ ಸಂದರ್ಭದಲ್ಲಿ ಭಾರತೀಯ ಮಾನವ ಹಕ್ಕುಗಳ ಪರಿಷತ್‌ನ ರಾಜ್ಯ ಕಾರ್ಯದರ್ಶಿಯಾದ ಎಂ ಡಿ ಹುಸೇನ್. ಜಿಲ್ಲಾಧ್ಯಕ್ಷರಾದ ಹಿದಾಯತ್ ದೊಡ್ಡಮನೆ , ಜಿಲ್ಲಾ ಸಂಚಾಲಕರಾದ ಶ್ರೀನಿವಾಸ್ ರೆಡ್ಡಿ.ತಾಲೂಕು ಅಧ್ಯಕ್ಷರಾದ ಕ್ಯಾದಿಗೆರ ನಬಿ ರಸೂಲ್. ತಾಲೂಕು ಸಂಚಾಲಕರಾದ ಇಸ್ಮಾಯಿಲ್. ಜಿಲ್ಲಾ ಕಾರ್ಯದರ್ಶಿಯಾದ ರಹೂಪ್.ಸ್ಥಳೀಯ ಮುಖಂಡರು ಹಾಗೂ ಜೆಸ್ಕಾಂ ಇಲಾಖೆಯ ಸಿಬ್ಬಂದಿಗಳು ಹಾಜರಿದ್ದರು

# ರಾಯಚೂರು ಗ್ರಾಮೀಣಾಭಿವೃದ್ಧಿ ತ್ರೈಮಾಸಿಕ ಪತ್ರಿಕೆ ಬಿಡುಗಡೆ



ಧೈರ್ಯದ ದಾರಿ

**ರಾಯಚೂರು ಮಾ,20–** ವಿವಿಧ ಯೋಜನೆಗಳ 'ರಾಯಚೂರು ಗ್ರಾಮೀಣಾಭಿವೃದ್ಧಿ ಪತ್ರಿಕೆ' ಎಂಬ ತ್ರೈಮಾಸಿಕ ಸುದ್ದಿ ಪತ್ರಿಕೆಯನ್ನು (ಮ್ಯಾಗಜೀನ್) ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ್ ಕಾಂದೂ ಅವರು ಮಾರ್ಚ 20ರಂದು ನಗರದ ಜಿಲ್ಲಾ ಪಂಚಾಯತಿ ಕಚೇರಿಯಲ್ಲಿ ಬಿಡುಗಡೆಗೊಳಿಸಿದರು.

ಈ ವೇಳೆ ಸಿಇಓ ಅವರು ಮಾತನಾಡಿ, ರಾಯಚೂರು ಗ್ರಾಮೀಣಾಭಿವೃದ್ಧಿ ತ್ರೈಮಾಸಿಕ ಪತ್ರಿಕೆಯು ಜಿಲ್ಲೆಯ ಸಾಧನೆಗಳು ಹಾಗೂ ಅಭಿವೃದ್ಧಿ ಪ್ರಯತ್ನಗಳ ಸಮಗ್ರ ಚಿತ್ರಣ ನೀಡುತ್ತದೆ ಎಂದರು.

ಶಾಲಾ ಮಕ್ಕಳು, ಮಹಿಳೆಯರು, ರೈತರು, ಕಾರ್ಮಿಕರು ಹಾಗೂ ವಿಶೇಷ ಚೇತನರ ಕಲ್ಯಾಣಕ್ಕಾಗಿ ಜಾರಿಗೊಂಡಿರುವ ವಿವಿಧ ಕಾರ್ಯಕ್ರಮಗಳು, ಜಿಲ್ಲೆಯ ಶಿಕ್ಷಣ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿನ ಜಿಲ್ಲೆಯ ಸಮಗ್ರ ಅಭಿವೃದ್ಧಿಯನ್ನು ಪ್ರತಿಬಿಂಬಿಸುತ್ತವೆ ಎಂದರು.

ಜಿಲ್ಲೆಯ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಸರ್ಕಾರದ ವಿವಿಧ ಯೋಜನೆಗಳು ಮಹತ್ವದ ಪಾತ್ರ ವಹಿಸಿವೆ. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಯೋಜನೆಯಡಿ ಸಂಜೀವಿನಿ ಮಾರ್ಟ್, ಅಕ್ಕ–ಕಫೆ, ಕುಕ್ಕುಟ ಮತ್ತು ಮತ್ಸ್ಯ ಸಂಜೀವಿನಿ ಘಟಕಗಳ ಮೂಲಕ ಸ್ವ–ಸಹಾಯ ಗುಂಪಿನ ಮಹಿಳೆಯರಿಗೆ ಉದ್ಯೋಗಾವಕಾಶ ಹಾಗೂ ಆರ್ಥಿಕ ಸ್ವಾವಲಂಬನೆ ಒದಗಿಸಲಾಗಿದೆ. ಮಹಿಳೆಯರಿಗೆ ಸೂಕ್ತ ತರಬೇತಿ ನೀಡಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ಕರೆತರುವ ಈ ಕಾರ್ಯ ಶ್ಲಾಘನೀಯವಾಗಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಮೂಲಕ ಗ್ರಾಮೀಣ ಕುಟುಂಬಗಳಿಗೆ ವರ್ಷಕ್ಕೆ 100 ದಿನಗಳ ಉದ್ಯೋಗ ಭದ್ರತೆ ಒದಗಿಸಲಾಗುತ್ತಿದ್ದು, ಗ್ರಾಮೀಣ ಜೀವನೋಪಾಯ ಸುಧಾರಣೆ ಹಾಗೂ ಆಸ್ತಿ ಸೃಜನೆಯಲ್ಲಿ ಇದು ಪರಿಣಾಮಕಾರಿ ಸಹಕಾರ ನೀಡುತ್ತಿದೆ. ಸ್ವಚ್ಛ ಭಾರತ ಮಿಷನ್ ಯೋಜನೆಯಡಿಯಲ್ಲಿ ಸ್ವಚ್ಛ ಸಂಕೀರ್ಣಗಳು, ಸಮುದಾಯ ಹಾಗೂ ವೈಯಕ್ತಿಕ ಶೌಚಾಲಯಗಳ ನಿರ್ಮಾಣ ಮತ್ತು ಘನ ತ್ಯಾಜ್ಯ ವಿಲೇವಾರಿ ಘಟಕಗಳ ಸ್ಥಾಪನೆಯಿಂದ ಸಾರ್ವಜನಿಕ ಆರೋಗ್ಯ, ನೈರ್ಮಲ್ಯ ಮತ್ತು ಸ್ವಚ್ಛತೆಯಲ್ಲಿ ಗಮನಾರ್ಹ ಪ್ರಗತಿ ಕಂಡುಬಂದಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಹಾಲಸಿದ್ದಪ್ಪ ಪೂಜೇರಿ, ಯೋಜನಾ ನಿರ್ದೇಶಕರಾದ ಶರಣಬಸವರಾಜ ಕೆ., ಮುಖ್ಯ ಯೋಜನಾಧಿಕಾರಿ ಡಾ.ಟಿ ರೋಣಿ, ಮುಖ್ಯ ಲೆಕ್ಕಾಧಿಕಾರಿ ವಿಜಯ ಶಂಕರ, ಸಹಾಯಕ ಕಾರ್ಯದರ್ಶಿ ರಾಘವೇಂದ್ರ ಸೇರಿದಂತೆ ಇನ್ನಿತರ ಅಧಿಕಾರಿ ಸಿಬ್ಬಂದಿ ಇದ್ದರು.

# ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳೆಯರಿಗೆ ಯೋಗ ತರಬೇತಿ: ಡಾ. ಅಂಬಿಕಾ ಮಧುಸೂದನ್



ಧೈರ್ಯದ ದಾರಿ

**ಮಾನ್ವಿ :** ಪಟ್ಟಣದ ಯೋಗ ಸನ್ನಿಧಿ ಜ್ಞಾನ ವಿದ್ಯಾಪೀಠ ಟ್ರಸ್ಟ್ ಸಭಾಂಗಣದಲ್ಲಿ ಯೋಗ ಸನ್ನಿಧಿ ಜ್ಞಾನ ವಿದ್ಯಾಪೀಠ ಟ್ರಸ್ಟ್ ಹಾಗೂ ಅದಿತಿ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ವೈಧ್ಯಾಧಿಕಾರಿಗಳಾದ ಡಾ. ಅಂಬಿಕಾ ಮಧುಸೂದನ್ ಉದ್ಘಾಟಿಸಿ ಮಾತನಾಡಿ ಬದಲಾದ ಇಂದಿನ ಜೀವನಶೈಲಿಯಲ್ಲಿ ಮಹಿಳೆಯರು ತಮ್ಮ ನಿತ್ಯ ಒತ್ತಡದ ಜೀವನದಿಂದಾಗಿ ಮಹಿಳೆಯರು ಮಧುಮೇಹ,ರಕ್ತದೊತ್ತಡ ಸೇರಿದಂತೆ ಇತರ ಕಾಯಿಲೆಗಳಿಂದ ಬಳಲುತ್ತಿದ್ದು ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕಾಗಿ ಪ್ರತಿ ನಿತ್ಯ ಸ್ವಲ್ಪ ಸಮಯ ಯೋಗಭ್ಯಾಸದಲ್ಲಿ ತೊಡಗುವುದರಿಂದ ಮಹಿಳೆಯರಲ್ಲಿ ಬರುವ ಅನೇಕ ಕಾಯಿಲೆಗಳಿಂದ ದೂರವಿರುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಉದ್ದೇಶದಿಂದ ಮಹಿಳೆಯರಿಗಾಗಿ ಒಂದು ವಾರಗಳ ಕಾಲ ಯೋಗಭ್ಯಾಸ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಬೆಂಗಳೂರು ಸ್ವಾಮಿ ವಿವೇಕಾನಂದ ಯೋಗ ವಿಶ್ವವಿದ್ಯಾಲಯದ ಯೋಗ ಗುರು ಕರಿಬಸಪ್ಪ ಜೀ ಮಾತನಾಡಿ ನಿಯಮಿತ ಯೋಗಾಭ್ಯಾಸದಿಂದ ಒತ್ತಡ ನಿವಾರಣೆಯಾಗಿ ಆರೋಗ್ಯಕರ ಜೀವನ ನಡೆಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು

ಕಾರ್ಯಕ್ರಮದಲ್ಲಿ ಶತಾಯುಷಿ ರಾಮಲಿಂಗಮ್ಮ ನಂದಿಹಾಳ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು

ಉಚಿತ ಯೋಗ ತರಬೇತಿ ಶಿಬಿರದಲ್ಲಿ ತರಬೇತಿ ಪಡೆದ ಮಹಿಳೆಯರಿಗೆ ಲಿಂಗಸಗೂರು ಸ್ವಾಮಿ ವಿವೇಕಾನಂದ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ಪ್ರಾಚಾರ್ಯರಾದ ರಾಜಶೇಖರ್.ಹೆಚ್ ಅವರು ಉಚಿತವಾಗಿ ಯೋಗ ಮ್ಯಾಟ್‌ಗಳನ್ನು ವಿತರಿಸಿದರು.

ಯೋಗ ಗುರುಗಳಾದ ಅನ್ನದಾನಯ್ಯ ಸ್ವಾಮಿ , ಶಿಕ್ಷಕರಾದ ಶರಣಯ್ಯ ಸ್ವಾಮಿ, ಗೌರಮ್ಮ, ದೀಪ್ತಿ, ಸುಮಾ, ಮಂಜುಳಾ, ಸೇರಿದಂತೆ ನೂರಾರು ಮಹಿಳೆಯರು ಭಾಗವಹಿಸಿದರು.

# ಜಯನಗರ ಶ್ರೀ ಬಸವೇಶ್ವರ ಯುವಕ ಸಂಘದ ವತಿಯಿಂದ ಯುಗಾದಿ ಹಬ್ಬದ ಅಂಗವಾಗಿ ಬೇವುಬೆಲ್ಲ ವಿತರಣೆ



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಸಿಂಧನೂರು ರಸ್ತೆಯಲ್ಲಿ ಶ್ರೀ ಬಸವೇಶ್ವರ ಯುವಕ ಸಂಘ ಜಯನಗರ ವತಿಯಿಂದ ಹಿಂದೂಗಳ ಹೊಸ ವರ್ಷವಾದ ಯುಗಾದಿ ಹಬ್ಬದ ಅಂಗವಾಗಿ ಹಮ್ಮಿಕೊಳ್ಳಲಾದ ಬೇವುಬೆಲ್ಲ ವಿತರಣೆ ಕಾರ್ಯಕ್ರಮಕ್ಕೆ ಕಲ್ಮಠದ ಶ್ರೀ ಸಂಗಯ್ಯಸ್ವಾಮಿಗಳು ಬೇವಿನ ಮಡಿಕೆಗೆ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿ ಮಾತನಾಡಿ ಹಿಂದೂಗಳ ಹೊಸವರ್ಷ ಪ್ರಾರಂಭವಾಗುವುದು ಯುಗಾದಿ ಹಬ್ಬದ ದಿನವಾಗಿದ್ದು ಪರಾಭವ ನಾಮ ಸಂವತ್ಸರವು ಎಲ್ಲಾರಿಗೂ ಉತ್ತಮ ಫಲಾಗಳನ್ನು ನೀಡಲಿ ಎಂದು ಶುಭಹಾರೈಸಿದರು.

ಸಾರ್ವಜನಿಕರಿಗೆ ಯುಗಾದಿ ಹಬ್ಬದ ಅಂಗವಾಗಿ ಬೇವನ್ನು ಹಂಚಲಾಯಿತು.

ಮಾಜಿ ಶಾಸಕರಾದ ಬಸವನಗೌಡ ಬ್ಯಾಗವಾಟ, ಗಂಗಾಧರನಾಯಕ, ತಾಲೂಕು ವೀರಶೈಲ ಲಿಂಗಾಯಾತ ಸಮಾಜದ ಗೌರವಧ್ಯಕ್ಷರಾದ ಶ್ರೀಧರಸ್ವಾಮಿ, ತಾ.ಅಧ್ಯಕ್ಷರಾದ ಹರಿಹರಪಾಟೀಲ್, ಶ್ರೀ ಬಸವೇಶ್ವರ ಯುವಕ ಸಂಘದ ಅಧ್ಯಕ್ಷರಾದ ರಾಜಶೇಖರಸ್ವಾಮಿ.ಸಿದ್ದಯ್ಯಸ್ವಾಮಿ ಕಳಿಮಠ. ಅಮರೇಗೌಡ ನಕ್ಕುಂದಿ,ದೇವರೆಡ್ಡಿ, ಹನುಮೇಶನಾಯಕ, ಹೆಚ್.ಮೌನೇಶ,ಗುರುಸಿದ್ದಯ್ಯಕಣ್ಣೂರು,ಈರಣ್ಣ,ಜೆ.ಸುಧಕರ್,ಶಿವಲಿಂಗಾಯ್ಯ, ಜಗದೀಶ ಓತ್ತೂರ್ ಸೇರಿದಂತೆ ಇನ್ನಿತರರು ಇದ್ದರು.

# ಕುರ್ವಕಲಾ ಗ್ರಾಮಕ್ಕೆ ಶಾಸಕರಾದ ಬಸನಗೌಡ ದದ್ದಲ್ ಭೇಟಿ; ಸೇತುವೆ ಕಾಮಗಾರಿ ಪರಿಶೀಲನೆ



ಧೈರ್ಯದ ದಾರಿ

**ರಾಯಚೂರು ಮಾ.20–** ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ರಾಯಚೂರು ಗ್ರಾಮೀಣ ಶಾಸಕರಾದ ಬಸನಗೌಡ ದದ್ದಲ್ ಅವರು ಮಾರ್ಚ 20ರಂದು ರಾಯಚೂರು ಗ್ರಾಮೀಣ ಭಾಗದಲ್ಲಿ ಪ್ರವಾಸ ಕೈಗೊಂಡು ರಾಯಚೂರು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರ ನೇತೃತ್ವದಲ್ಲಿ ಕುರ್ವಕಲಾ ಗ್ರಾಮಕ್ಕೆ ಭೇಟಿ ನೀಡಿ, ಸೇತುವೆ ಕಾಮಗಾರಿಯ ವೀಕ್ಷಣೆ ನಡೆಸಿದರು.ಭೇಟಿ ಸಂದರ್ಭದಲ್ಲಿ ಶಾಸಕರು, ದೇವಸ್ಥಾನ ಸುತ್ತಲು ಸಂಚರಿಸಿ ವೀಕ್ಷಣೆ ನಡೆಸಿ, ರಸ್ತೆಗಳು, ಕುಡಿಯುವ ನೀರು, ಸಮುದಾಯ ಭವನ, ಕಲ್ಯಾಣ ಮಂಟಪ ಹಾಗೂ ಹಲವಾರು ಅಭಿವೃದ್ಧಿ ಕಾಮಗಾರಿಗಳ ನೀಲಿ ನಕ್ಷೆ ತಯಾರಿಸಲು ಅಧಿಕಾರಿಗಳಿ ಸೂಚನೆ ನೀಡಿದರು.ರಾಯಚೂರು ಸೇರಿದಂತೆ ಸುತ್ತಲಿನ ಜಿಲ್ಲೆಗಳ ಮತ್ತು ಬೇರೆ ಬೇರೆ ರಾಜ್ಯಗಳ ಬಹಳಷ್ಟು ಭಕ್ತರು ಇಲ್ಲಿಗೆ ಆಗಮಿಸುತ್ತಾರೆ. ಹಾಗಾಗಿ ಗ್ರಾಮ ಸಂಪರ್ಕದ ಎಲ್ಲ ರಸ್ತೆಗಳು ಅಚ್ಚುಕಟ್ಟಾಗಿ ಇರಬೇಕು. ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.ದೇವಸ್ಥಾನದ ಅಭಿವೃದ್ಧಿಯ ಜೊತೆಗೆ ಇಲ್ಲಿಗೆ ಆಗಮಿಸುವ ಭಕ್ತರಿಗೆ ಮೂಲಭೂತ ಸೌಲಭ್ಯ ಒದಗಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಧಾರ್ಮಿಕ ಕ್ಷೇತ್ರಗಳನ್ನು ಅಭಿವೃದ್ಧಿಗೊಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂಬುದನ್ನು ಅರಿತು ಅಧಿಕಾರಿಗಳು ರಸ್ತೆ ಅಭಿವೃದ್ಧಿ, ಕುಡಿಯುವ ನೀರು ಸರಬರಾಜು, ಸಮುದಾಯ ಭವನ ನಿರ್ಮಾಣ, ಕಲ್ಯಾಣ ಮಂಟಪ ನಿರ್ಮಾಣ ಸೇರಿದಂತೆ ಅಗತ್ಯ ಅಭಿವೃದ್ಧಿ ಕಾಮಗಾರಿಗಳ ನೀಲಿನಕ್ಷೆಯನ್ನು ಕೂಡಲೇ ಸಿದ್ಧಪಡಿಸಬೇಕು ಎಂದು ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ಸಹಾಯಕ ಆಯುಕ್ತರಾದ ಹಂಪಣ್ಣ ಸಜ್ಜನ, ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರಾದ ವೆಂಕಟೇಶ ಗಲಗ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ರಾಘವೇಂದ್ರ, ಕಂದಾಯ ನಿರೀಕ್ಷಕರು ಹಾಗೂ ಗ್ರಾಮ ಆಡಳಿತ ಅಧಿಕಾರಿಗಳು ಮತ್ತು ಗ್ರಾಮದ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ದತ್ತಾತ್ರೇಯ ಸ್ವಾಮಿಯ ದರ್ಶನ: ಗ್ರಾಮೀಣ ಪ್ರವಾಸ ಸಂದರ್ಭದಲ್ಲಿ ಶಾಸಕರು ಗ್ರಾಮಸ್ಥರೊಂದಿಗೆ ರಾಯಚೂರು ಗ್ರಾಮೀಣ ಕ್ಷೇತ್ರ ವ್ಯಾಪ್ತಿಯ ಕರ್ವಕಲಾ ಗ್ರಾಮದ ಆರಾಧ್ಯ ದೇವರಾದ ದತ್ತಾತ್ರೇಯ ಸ್ವಾಮಿಯ ಆಶೀರ್ವಾದ ಪಡೆದರು.

# ಗ್ರಾಮೀಣ ಪ್ರದೇಶದ ಬಡ ಮುಸ್ಲಿಂ ಕುಟುಂಬಗಳಿಗೆ ಆಹಾರ ಕಿಟ್ ನೀಡಿ: ಹಾಜೀಮಸ್ತಾನ್

ಧೈರ್ಯದ ದಾರಿ



**ಮಾನ್ವಿ:** ಪ್ರತಿವರ್ಷ ರಂಜಾನ್ ಹಬ್ಬದ ಪ್ರಯುಕ್ತ ಕಾಂಗ್ರೆಸ್ ಪಕ್ಷದಿಂದ ನಗರ ಪ್ರದೇಶದ ಜನರಿಗೆ ಮಾತ್ರ ಆಹಾರ ಕಿಟ್ ನೀಡಲಾಗುತ್ತದೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಅನೇಕ ಬಡ ಮುಸ್ಲಿಂ ಕುಟುಂಬಗಳಿಗೆ ಆಹಾರ ಕಿಟ್ ನೀಡುವಲ್ಲಿ ತಾರತಮ್ಯ ನೀತಿ ಅನುಸರಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಪಕ್ಷದ ಮುಖಂಡ ಹಾಜೀಮಸ್ತಾನ್ ಅಮರೇಶ್ವರ ಕ್ಯಾಂಪ್ ಬೇಸರ ವ್ಯಕ್ತಪಡಿಸಿದ್ದಾರೆ.

ಸಣ್ಣ ನೀರಾವರಿ ವಿಜ್ಞಾನ ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು, ಶಾಸಕ ಹಂಪಯ್ಯನಾಯಕ, ರಾಜ್ಯ ಯುವ ಮುಖಂಡ ರವಿ ಬೋಸರಾಜು ಅವರು ರಂಜಾನ್ ಹಬ್ಬದ ಪ್ರಯುಕ್ತ ಪ್ರತಿವರ್ಷ ಕುಟುಂಬಗಳಿಗೆ ಕಾಂಗ್ರೆಸ್ ಪಕ್ಷದಿಂದ ನೀಡುವ ಆಹಾರ ಕಿಟ್ ಸೇರಿದಂತೆ ಇನ್ನಿತರ ಸಹಾಯ ಸಹಕಾರಗಳು ಬರೀ ನಗರ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿದೆ. ಗ್ರಾಮೀಣ ಪ್ರದೇಶದ ಬಡ ಜನರು ನಿಮಗೆ ಕಾಣಿಸುತ್ತಿಲ್ಲವೆ. ಗ್ರಾಮೀಣ ಭಾಗದ ಬಡ ಮುಸ್ಲಿಂ ಸಮುದಾಯವನ್ನು ತೀರಾ ನಗಣ್ಯವಾಗಿ ಪರಿಗಣಿಸಲಾಗುತ್ತದೆ. ಚುನಾವಣೆ ಸಂದರ್ಭದಲ್ಲಿ ಮಾತ್ರ ಬಡ ಜನರ ಓಟು ಬೇಕು. ಆದರೆ ಸೌಲಭ್ಯಗಳನ್ನು ಒದಗಿಸುವುದು ಮರೆತು ಹೋಗುತ್ತದೆ. ಇನ್ನೂ ಮುಂದಿದಿನಗಳಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರು ಎಚ್ಚೆತ್ತುಕೊಂಡು ಗ್ರಾಮೀಣ ಪ್ರದೇಶದ ಮುಸ್ಲಿಂ ಬಡ ಜನರಿಗೆ ಸಹಾಯ ಸಹಕಾರದ ಹಸ್ತ ಚಾಚುವತ್ತ ಗಮನಹರಿಸಿ ಎಂದು ಹಾಜೀಮಸ್ತಾನ್ ಅಮರೇಶ್ವರ ಕ್ಯಾಂಪ್ ಅವರು ಪತ್ರಿಕಾ ಹೇಳಿಕೆ ಮೂಲಕ ತಿಳಿಸಿದ್ದಾರೆ.

# ಏಪ್ರೀಲ್ ಕೋನೆಯ ವಾರದೊಳಗಾಗಿ ತುಂಗಭದ್ರ ಜಲಾಶಯದ ಕ್ರಾಸ್ಟ್ ಗೇಟ್‌ಗಳ ದುರಸ್ಥಿ ಪೂರ್ಣಗೊಳಿಸಲಾಗುವುದು



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವ ಎನ್.ಎಸ್,ಬೋಸರಾಜು ಮಾತನಾಡಿ ತುಂಗಭದ್ರ ಜಲಾಶಯದ ಕ್ರಾಸ್ಟ್ ಗೇಟ್‌ಗಳ ದುರಸ್ಥಿ ಹಿನ್ನೆಲೆಯಲ್ಲಿ ಕಾಲುವೆಗಳಿಗೆ ನೀರನ್ನು ಬಿಟ್ಟಿರಲಿಲ್ಲ ಅದರೆ ಈ ಭಾಗದ ಕುಡಿಯುವ ನೀರಿನ ಪೂರೈಕೆಗಾಗಿ ತುರ್ತಗಿ ಕುಡಿಯವ ನೀರಿನ ಕೆರೆಗಳನ್ನು ತುಂಬಿಸಿಕೊಳ್ಳಬೇಕಾಗಿರುವುದರಿಂದ ಕಾಲುವೆಗೆ ನೀರು ಬಿಡುವಂತೆ ಜಿಲ್ಲಾಧಿಕಾರಿಗಳು ಪತ್ರ ಬರೆದಿದ್ದರಿಂದ ಜಲಾಶಯದಿಂದ ಕುಡಿಯುವ ನೀರಿಗಾಗಿ ಕಾಲುವೆಗೆ ನೀರು ಬಿಡಲಾಗಿತು ಅದ್ದರೆ ಮುಖ್ಯ ಕಾಲುವೆಯ 13 ನೇ ಮೈಲ್ ಹತ್ತಿರ ಬಸಾಪೂರ ಮತ್ತು ಬಂಡಿಹರ್ಲಾಪೂರ ಗ್ರಾಮದ ಹತ್ತಿರ ನಾಲೆ ಒಡೆದುಹೋಗಿರುವುದರಿಂದ ಕುಡಿಯುವ ನೀರು ಬಿಡುವುದಕ್ಕೆ ತೊಂದರೆಯಾಗಿದ್ದು ಬೇಸಿಗೆಯಾಗಿರುವುದರಿಂದ ಜನರಿಗೆ ಕುಡಿಯುವ ನೀರಿನ ತೊಂದರೆಯಾಗದಂತೆ ಇಂದು ನಾಲೆ ಒಡೆದು ಹೋಗಿರುವ ಪ್ರದೇಶಕ್ಕೆ ಮಸ್ಕಿ ಶಾಸಕರಾದ ಬಸವನಗೌಡ ತುರ್ವಿಹಾಳ್ ಅವರೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ತುರ್ತು ನಾಲೆಯ ದುರಸ್ತಿಗೆ ನಾಲೆಗಳ ನಿರ್ವಹಣೆಯ ಬಗ್ಗೆ ಅಪಾರ ಅನುಭವ ಹೊಂದಿರುವ ನಿವೃತ್ತ ಇಂಜಿನೀಯರ್ ಮಂಜಪ್ಪ ರವರ ನೆರವಿನೊಂದಿಗೆ ನೀರಾವರಿ ಇಂಜಿನಿಯರುಗಳು ತುರ್ತು ದುರಸ್ತಿಗಾಗಿ ತಾತ್ಕಲಿಕವಾಗಿ ಮರಳಿನ ಚೀಲಗಳನ್ನು ಇಟ್ಟು ದುರಸ್ತಿ ನಡೆಸಿ ಕುಡಿಯುವ ನೀರಿನ ಕೆರೆಗಳಿಗೆ ನೀರು ತುಂಬಿಸಿದ ನಂತರ ಶಾಶ್ವತವಾಗಿ ನಾಲೆ ದುರಸ್ಥಿ ಕೈಗೊಳ್ಳುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಈ ವೇಳೆ ಗ್ರಾಮದ ರೈತರು ನಾಲೆ ಒಡೆದಿರುವುದರಿಂದ ಅಪಾರ ಪ್ರಮಾಣದಲ್ಲಿ ಬೆಳೆ ನಷ್ಟವಾಗಿದ್ದು ಪರಿಹಾರ ನೀಡುವವರೆಗೂ ನಾಲೆ ದುರಸ್ಥಿ ಮಾಡುವುದಕ್ಕೆ ಬಿಡುವುದಿಲ್ಲ ಎಂದು ವಿರೋಧ ವ್ಯಕ್ತ ಪಡಿಸಿದ್ದರಿಂದ ಕಂದಾಯ ಇಲಾಖೆ ಹಾಗೂ ಕೃಷಿ ಇಲಾಖೆಯಿಂದ ಬೆಳೆ ನಷ್ಟವಾಗಿರುವ ಜಮೀನುಗಳ ಸಮೀಕ್ಷೆ ನಡೆಸಿದ್ದು 92 ಎಕರೆಯಷ್ಟು ಬೆಳೆ ನಷ್ಟವಾಗಿರುವ ಕುರಿತು ಅಂದಾಜಿಸಲಾಗಿದು ರೈತರಿಗೆ ಬೆಳೆ ನಷ್ಟ ಪರಿಹಾರವನ್ನು ನೀಡಲಾಗುವುದು. ಎರಡರಿಂದ ಮೂರುದಿನಗಳಲ್ಲಿ ಕಾಲುವೆ ಮೂಲಕ ಕುಡಿಯುವ ನೀರನ್ನು ಕೆರೆಗಳಿಗೆ ಬಿಡುವುದರಿಂದ ಮಾನ್ವಿಗೆ ಕುಡಿಯುವ ನೀರು ಪೂರೈಸುವ ರಬ್ಬಣಕಲ್ ಕೆರೆಗೆ ನೀರು ತುಂಬಿಸಿಕೊಳ್ಳುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ ಪುರಸಭೆ ಮುಖ್ಯಾಧಿಕಾರಿ ಪರಶುರಾಮ್ ದೇವಮಾನೆ ರವರಿಗೆ ಸೂಚನೆ ನೀಡಲಾಗಿದೆ. ಮಾನ್ವಿ ಪಟ್ಟಣಕ್ಕೆ ಕುಡಿಯುವ ನೀರಿನ ಪೂರೈಕೆಗೆ ತೊಂದರೆಯಾಗದಂತೆ ತುಂಗಭದ್ರ ನದಿಗೆ ಬಿಡುವ 3 ಟಿ.ಎಂ.ಸಿ, ನೀರನ್ನು ಬಳಸಿಕೊಳ್ಳುವುದು ಸೇರಿದಂತೆ ನದಿಯ ದಡದಲ್ಲಿ ಕೈ ಬೊರ್ ಹಾಕಿಸಿ ಜಾಕ್ ವೆಲ್‌ಗೆ ನೀರು ಬಿಡುವುದಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ಹೆಚ್ಚಿನ ತೊಂದರೆ ಇರುವ ವಾರ್ಡಗಳಿಗೆ ಪುರಸಭೆಯ 5 ಟ್ಯಾಂಕರ್‌ಗಳನ್ನು ಬಳಸಿಕೊಂಡು ನೀರು ಪೂರೈಸುವುದಕ್ಕೆ ಪುರಸಭೆಯಿಂದ ಕ್ರಮ ಕೈಗೊಳ್ಳಲಾಗುವುದು. ಜೂನ್ ಮತ್ತು ಜುಲೈ ತಿಂಗಳಲ್ಲಿ ತುಂಗಭದ್ರ ಜಲಾಶಯದಲ್ಲಿ ನೀರಿನ ಹರಿವು ಹೆಚ್ಚಳವಾಗುವುದರಿಂದ ಇಂದು ತುಂಗಭದ್ರ ಅಣೆಕಟ್ಟೆಗೆ ಭೇಟಿ ನೀಡಿ ಕ್ರಾಸ್ಟ್ ಗೇಟ್‌ಗಳ ಅಳವಡಿಸುವ ಕಾಮಗಾರಿಯನ್ನು ಪರಿಶೀಲಿಸಲಾಗಿ ಟೆಂಡರ್ ಪಡೆದ ಗುತ್ತಿಗೆದಾರರು ಹೊರಗಡೆ ಗೇಟ್‌ಗಳನ್ನು ತಯಾರಿ ಮಾಡಿಕೊಂಡು ಅಣೇಕಟ್ಟೆಗೆ ಅಳವಡಿಸುತ್ತಿರುವುದರಿಂದ 33 ಕ್ರಾಸ್ಟ್ ಗೇಟ್‌ಗಳ ಅಳವಡಿಸುವ ಕಾರ್ಯ ನಿಗದಿತ ಅವಧಿ ಜೂನ್‌ಗಿಂತ ಮುಂಚಿತವಾಗಿ ಏಪ್ರೀಲ್ ಕೋನೆಯಲ್ಲಿ ಪೂರ್ಣವಾಗಲಿದೆ ಇದುವರೆಗೂ 18 ಗೇಟ್‌ಗಳನ್ನು ಅಳವಡಿಸುವ ಕಾರ್ಯ ಸಂಪೂರ್ಣವಾಗಿದ್ದು 5ಗೇಟ್‌ಗಳನ್ನು ಪ್ರಸ್ತುತವಾಗಿ ಅಳವಡಿಸುವ ಕಾರ್ಯ ನಡೆಯುತ್ತಿದೆ.

ಕ್ರಾಸ್ಟ್ ಗೇಟ್‌ಗಳ ಎರಡು ಬದಿಯಲ್ಲಿ ಒಟ್ಟು 66 ಚೈನ್‌ಗಳನ್ನು ಅಳವಡಿಸುವುದಕ್ಕೆ ತಮಿಳುನಾಡಿನ ಸಂಸ್ಥೆಯವರು ಟೆಂಡರ್ ಪಡೆದಿದ್ದು ಅವರಿಗೂ ಕೂಡ ಜೂನ್ ಮಾಸದ ಒಳಗಾಗಿ ಚೈನ್‌ಗಳನ್ನು ಅಳವಡಿಸುವುದಕ್ಕೆ ಹೆಚ್ಚಿನ ತಂಡಗಳನ್ನು ನಿಯೋಜಿಸುವಂತೆ ಸೂಚನೆ ನೀಡಲಾಗಿದೆ. ಕೇಲವರು ಅಣೇಕಟ್ಟೆಗೆ ಗೇಟ್ ಅಳವಡಿಸುವ ಕುರಿತು ರೈತರಿಗೆ ವದಂತಿಗಳ ಮೂಲಕ ದಾರಿತಪ್ಪಿಸುವ ಕಾರ್ಯ ಮಾಡುತ್ತಿದ್ದು ಸರ್ಕಾರವು ಜೂನ್ ತಿಂಗಳೊಳಗಾಗಿ ಎಲ್ಲಾ 33 ಗೇಟ್‌ಗಳನ್ನು ಅಳವಡಿಸಿ ಜಲಾಶಯದಲ್ಲಿ ನೀರನ್ನು ಸಂಗ್ರಹಿಸಿ ಈ ಬಾರಿ ರೈತರ ಬೆಳೆಗೆ ನೀರನ್ನು ಕೊಟ್ಟೆ ಕೊಡಲಾಗುವುದು ರೈತರು ಯಾವುದೆ ರೀತಿಯಿಂದ ಅತಂಕ ಪಡುವ ಅಗತ್ಯವಿಲ್ಲ ಎಂದು ತಿಳಿಸಿದರು. ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷರಾದ ಅಬ್ದುಲ್ ಗಾಪೂರ್ ಸಾಬ್,ಗ್ಯಾರಂಟಿ ಸಮಿತಿ ತಾ.ಅಧ್ಯಕ್ಷರಾದ , ಬಿ.ಕೆ. ಅಂಬರೇಶಪ್ಪ, ಜಿ.ನಾಗರಾಜ್, ಕಿರಿಲಿಂಗಪ್ಪ, ಮಹಾಂತೇಶ್ ಸ್ವಾಮಿ ರೌಡೂರು, ಹೋನ್ನಪ್ಪ ಹೆಳವಾರ್, ಸೈಯಾದ್ ಖಾಲಿದ್ ಖಾದ್ರಿ,ರಾಜಾ ಸುಭಾಷಚಂದ್ರನಾಯಕ, ಹುಸೇನ್ ಬೇಗ್, ಹಿದಾಯತ್ ನಾಯ್ಕ್ ಇದ್ದರು.

# ಸೌಹಾರ್ದತೆಯ ಹಬ್ಬ: ಎನ್.ಎಸ್. ಬೋಸ್‌ರಾಜ್ ಫೌಂಡೇಶನ್ ವತಿಯಿಂದ ಮುಸ್ಲಿಂ ಬಡವರಿಗೆ ಹಬ್ಬದ ಕಿಟ್ ವಿತರಣೆ



ಧೈರ್ಯದ ದಾರಿ

**ಸಿರವಾರ** :ಜಾತಿ-ಧರ್ಮದ ಹಂಗಿಲ್ಲದೆ ಮಾನವೀಯತೆಯೇ ದೊಡ್ಡದು ಎಂಬ ಸಂದೇಶ ಸಾರುತ್ತಿರುವ ಎನ್.ಎಸ್. ಬೋಸ್ ರಾಜ್ ಫೌಂಡೇಶನ್, ಈ ಬಾರಿ ಮುಸ್ಲಿಂ ಬಾಂಧವರ ಪವಿತ್ರ ಹಬ್ಬದ ಪ್ರಯುಕ್ತ ನೂರಾರು ಬಡ ಕುಟುಂಬಗಳಿಗೆ ವಿಶೇಷ 'ಹಬ್ಬದ ಕಿಟ್'ಗಳನ್ನು ವಿತರಿಸುವ ಮೂಲಕ ಮಾದರಿಯಾಗಿದೆ.

ಪಟ್ಟಣದ ಎಲ್ಲಾ ಸದಸ್ಯರು ತಮ್ಮ ತಮ್ಮ ವಾರ್ಡ್ಗಳಲ್ಲಿ ಹಮ್ಮಿಕೊಳ್ಳಲಾಗಿದ್ದ ಈ ಕಾರ್ಯಕ್ರಮದಲ್ಲಿ, ಆರ್ಥಿಕವಾಗಿ ಹಿಂದುಳಿದಿರುವ ಮುಸ್ಲಿಂ ಕುಟುಂಬಗಳನ್ನು ಗುರುತಿಸಿ ಅವರಿಗೆ ಅಗತ್ಯವಿರುವ ದಿನಸಿ ಸಾಮಗ್ರಿಗಳನ್ನು ತಲುಪಿಸಲಾಯಿತು.

**ಸೌಹಾರ್ದತೆ ಮೆರೆದ ಫೌಂಡೇಶನ್:** "ಎಲ್ಲಾ ಧರ್ಮದವರು ಒಟ್ಟಾಗಿ ಸೌಹಾರ್ದತೆಯಿಂದ ಬಾಳಬೇಕು. ಹಬ್ಬದ ಸಂಭ್ರಮವು ಕೇವಲ ಶ್ರೀಮಂತರಿಗೆ ಸೀಮಿತವಾಗದೆ, ಪ್ರತಿಯೊಬ್ಬ ಬಡವನ ಮನೆಯಲ್ಲೂ ಒಲೆ ಉರಿಯಬೇಕು ಎಂಬ ಸದಾಶಯ ನಮ್ಮ ಸಚಿವರದ್ದು ಎಂದು ಪಟ್ಟಣ ಪಂಚಾಯತ್ ಅಧ್ಯಕ್ಷರಾದ ಹಾಜಿ ಚೌದರಿ ಅವರು ಈ ಸಂದರ್ಭದಲ್ಲಿ ತಿಳಿಸಿದರು.

ಫಲಾನುಭವಿಗಳ ಸಂತಸ: ಕಿಟ್ ಪಡೆದ ಹಿರಿಯ ಮಹಿಳೆಯೊಬ್ಬರು ಮಾತನಾಡಿ, "ಹಬ್ಬದ ಸಮಯದಲ್ಲಿ ದಿನಸಿ ವಸ್ತುಗಳ ಬೆಲೆ ಏರಿಕೆಯಾಗಿರುವುದರಿಂದ ಕಷ್ಟವಾಗಿತ್ತು. ಫೌಂಡೇಶನ್ ನೀಡಿದ ಈ ನೆರವು ನಮ್ಮ ಹಬ್ಬಕ್ಕೆ ದೊಡ್ಡ ಆಸರೆಯಾಗಿದೆ," ಎಂದು ಕೃತಜ್ಞತೆ ಸಲ್ಲಿಸಿದರು.

**ಸಾಮಾಜಿಕ ಕಳಕಳಿ:** ಕೇವಲ ಹಬ್ಬಗಳಲ್ಲದೆ, ಎನ್.ಎಸ್. ಬೋಸ್ ರಾಜ್ ಫೌಂಡೇಶನ್ ನಿರಂತರವಾಗಿ ಶಿಕ್ಷಣ, ಆರೋಗ್ಯ ಮತ್ತು ಹಸಿವು ಮುಕ್ತ ಸಮಾಜಕ್ಕಾಗಿ ಶ್ರಮಿಸುತ್ತಿದೆ. ಇಂದಿನ ಈ ಕಾರ್ಯಕ್ರಮವು ಸಮಾಜದಲ್ಲಿ ಭಾವೈಕ್ಯತೆಯನ್ನು ಬೆಳೆಸುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆಯಾಗಿದೆ ಎಂದು ಸ್ಥಳೀಯ ಪಟ್ಟಣ ಪಂಚಾಯತ್ ಸದಸ್ಯರಾದ ಮೌಲಾಸಾಬ್ ವರ್ಚಸ್ ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಫೌಂಡೇಶನ್‌ನ ಪದಾಧಿಕಾರಿಗಳು, ಪಟ್ಟಣ ಪಂಚಾಯತ್ ಸದಸ್ಯರಾದ ಹಾಸೆನಲ್ಲಿ ಸಾಬ್. ಸ್ಥಳೀಯ ಧಾರ್ಮಿಕ ಮುಖಂಡರಾದ ಪಾಷಾ ಬಡೆಗರ್. ಬಾಬು. ಹಾಗೂ ಸಮಾಜ ಸೇವಕರು ಉಪಸ್ಥಿತರಿದ್ದರು.

# ರಂಜಾನ್ ಹಬ್ಬದ ಪ್ರಯುಕ್ತ ಜೆಡಿಎಸ್ ಪಕ್ಷದಿಂದ ಹಣ್ಣು ಹಂಪಲು ಕಿಟ್‌ಗಳ ವಿತರಣೆ



ಧೈರ್ಯದ ದಾರಿ

**ಮಾನ್ವಿ:** ಪವಿತ್ರ ರಂಜಾನ್ ಹಬ್ಬದ ಪ್ರಯುಕ್ತ ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಅವರು ನಗರದ ವಿವಿಧ ಮಸೀದಿಗಳಿಗೆ ಭೇಟಿ ನೀಡಿ ಮುಸ್ಲಿಂ ಭಾಂದವರಿಗೆ ಪವಿತ್ರ ರಂಜಾನ್ ಹಬ್ಬದ ಶುಭ ಕೋರುವ ಮೂಲಕ ಜೆಡಿಎಸ್ ಪಕ್ಷದಿಂದ ಹಣ್ಣು ಹಂಪಲು ಕಿಟ್ಟುಗಳನ್ನು ವಿತರಣೆ ಮಾಡಿದರು.

ಈ ಸಂದರ್ಭದಲ್ಲಿ ಜೆಡಿಎಸ್ ರಾಜ್ಯಾ ಯುವ ಘಟಕ ಉಪಾಧ್ಯಕ್ಷ ರಾಜಾ ರಾಮಚಂದ್ರ ನಾಯಕ,

ಜೆಡಿಎಸ್ ಪಕ್ಷದ ತಾಲೂಕ ಅಧ್ಯಕ್ಷರು ಡಾ. ಈರಣ್ಣ ಮರ್ಲಟ್ಟಿ,ಪುರಸಭೆ ಸದಸ್ಯ ಭಾಷಾ, ಶರಣಪ್ಪ ಮೇಧ ನಗರ ಅಧ್ಯಕ್ಷ ಹೆಚ್. ಮುನೇಶ್, ಹಾಗೂ ಪಕ್ಷದ ಮುಖಂಡರಾದ ವಿಜಯ ಕುಮಾರ, ಸಂತೋಷ್ ಹೊಗಾರ್ ಸೇರಿದಂತೆ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು

# ಹೊನ್ನೇರು ಎತ್ತಿನಗಾಡಿ ಮೆರವಣಿಗೆ ಸಂಭ್ರಮ



**ಚಾಮರಾಜನಗರ ಮಾ.20–** ತಾಲ್ಲೂಕಿನ ಹೆಬ್ಬಸೂರು ಗ್ರಾಮದಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ಹೊನ್ನೇರು ಮೆರವಣಿಗೆಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಮುಂಜಾನೆಯೇ ಎತ್ತುಗಳನ್ನು ತೊಳೆದು ಅದಕ್ಕೆ ಸಿಂಗರಿಸಿ ಎತ್ತಿನಗಾಡಿಗಳಿಗೂ ಸಿಂಗರಿಸಿ ಗೊಬ್ಬರವನ್ನು ಎತ್ತಿನಗಾಡಿಯಲ್ಲಿ ಇರಿಸಿ ಹೊನ್ನೇರು ಕಟ್ಟಿ ವಿಶೇಷವಾಗಿ ಪೂಜೆ ಸಲ್ಲಿಸಿದರು.

ನಂತರ ಗ್ರಾಮದ ಯಜಮಾನರು, ಗ್ರಾಮದವರಿಗೆಲ್ಲರೂ ಸೇರಿ ಹೊನ್ನೇರಿಗೆ ಹಣ್ಣು ಕಾಯಿ ನೈವೇದ್ಯವನ್ನು ಮಾಡಿ ಗ್ರಾಮಗಳ ಎಲ್ಲಾ ಬೀದಿಗಳಲ್ಲೂ ಮೆರವಣಿಗೆಯ ಮೂಲಕ ಉತ್ಸವದ ರೀತಿಯಲ್ಲಿ ಹೊನ್ನೀರು ಕಟ್ಟಿದ ಎತ್ತಿನ ಗಾಡಿಗಳನ್ನು ಮೆರವಣಿಗೆ ಮಾಡಿದರು.

ಗ್ರಾಮದ ಪ್ರಮುಖ ಬೀದಿಗಳಲ್ಲಿ ಮನೆಯವರು ಹೊನ್ನೇರು ಕಟ್ಟಿದ ಎತ್ತಿನಗಾಡಿಗೆ ಮಂಗಳಾರತಿ ನೆರವೇರಿಸಿ ಪೂಜೆ ಸಲ್ಲಿಸಿ ಕೈಮುಗಿದು ಎಲ್ಲರಿಗೂ ಒಳ್ಳೆಯದಾಗಲಿ ಗ್ರಾಮಕ್ಕೆ ಯಾವುದೇ ತೊಂದರೆ ಆಗದಂತೆ ದೇವರಲ್ಲಿ ಪ್ರಾರ್ಥಿಸಿದರು.

ಎಲ್ಲಾ ಬೀದಿಗಳಲ್ಲೂ ಹೊನ್ನೇರಿಗೆ ಪೂಜೆ ಸಲ್ಲಿಸುತ್ತಾರೆ. ನಂತರ ಅಲ್ಲಿ ದೇವಸ್ಥಾನದ ಮುಂದೆ ಹೊನ್ನೇರು ಕಟ್ಟಿದ ಎತ್ತಿನ ಗಾಡಿಗಳಿಗೆ ವಿಶೇಷ ಪೂಜೆಯನ್ನು ಸಲ್ಲಿಸಿ ತದನಂತರ ಅವರವರ ಜಮೀನುಗಳಿಗೆ ಗದ್ದೆಗಳಿಗೆ ಹೋಗಿ ಪೂಜೆ ಸಲ್ಲಿಸಿದ್ದ ಗೊಬ್ಬರಗಳನ್ನು ತಮ್ಮ ಜಮೀನಿಗೆ ಹಾಗೂ ಗದ್ದೆಗಳಿಗೆ ಅದನ್ನು ಹಾಕಿ ಬೆಳೆಯುವ ಬೆಳೆಗೆ ಯಾವುದೇ ತೊಂದರೆಯಾಗದೆ ರೈತರಿಗೆ ಸಂತೋಷ ತಂದು ಕೊಡಲಿ ನಮ್ಮ ಗ್ರಾಮ ಅಭಿವೃದ್ಧಿಯಾಗಲಿ ಮಳೆ ಬೆಳೆ ಚೆನ್ನಾಗಿ ಆಗಲಿ ಎಂದು ಪ್ರಾರ್ಥಿಸಿದರು.

ಎತ್ತುಗಳ ಪೂಜೆ: ರೈತರು ಸೂರ್ಯೋದಯಕ್ಕೂ ಮುನ್ನ ಎತ್ತುಗಳನ್ನು ತೊಳೆಯುತ್ತಾರೆ, ಕೊಂಬುಗಳಿಗೆ ಹೊಂಬಾಳೆ, ಹೂವುಗಳನ್ನು ಕಟ್ಟಿ ಅಲಂಕರಿಸುತ್ತಾರೆ.

ಗಾಡಿ ಸಿಂಗಾರ: ಎತ್ತಿನ ಗಾಡಿಗಳಿಗೆ ಬಣ್ಣ ಬಳಿದು, ಮಾವಿನ ಎಲೆ ಮತ್ತು ಬಾಳೆ ಕಂದುಗಳಿಂದ ಸಿಂಗರಿಸಿ, ಸಾಂಕೇತಿಕವಾಗಿ ಕೊಟ್ಟಿಗೆ ಗೊಬ್ಬರ ತುಂಬುತ್ತಾರೆ. ನಂತರ ಅಲಂಕೃತ ಗಾಡಿಗಳನ್ನು ಮಂಗಳವಾದ್ಯಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ಜಮೀನಿಗೆ ಕೊಂಡೊಯ್ಯುತ್ತಾರೆ.

ಕೃಷಿ ಆರಂಭ: ಜಮೀನಿನಲ್ಲಿ ಭೂಮಿ ತಾಯಿಗೆ ಪೂಜೆ ಸಲ್ಲಿಸಿ, ಗೊಬ್ಬರವನ್ನು ಚಲ್ಲಿ ಹೊಸ ವರ್ಷದ ಕೃಷಿ ಕಾರ್ಯಗಳಿಗೆ ಚಾಲನೆ ನೀಡುತ್ತಾರೆ.

ಈ ಹಬ್ಬದಲ್ಲಿ ಕುಟುಂಬದವರೆಲ್ಲರೂ ಹೊಸ ಬಟ್ಟೆ ಧರಿಸಿ, ಇಡ್ಲಿ, ಹೋಳಿಗೆ ಮತ್ತು ಪಾಯಸದಂತಹ ಸಿಹಿ ತಿನಿಸುಗಳನ್ನು ಸವಿದು ಸಂಭ್ರಮಿಸುತ್ತಾರೆ.

ಚಾಮರಾಜನಗರ ಜಿಲ್ಲೆಯ, ಹೆಬ್ಬಸೂರು, ಹೊನ್ನೂರು, ಬೊಮ್ಮಲಾಪುರ, ಹಂಗಳ ಮುಂತಾದ ಗ್ರಾಮಗಳ ಕಡೆ ಈ ಸಂಪ್ರದಾಯ ಇಂದಿಗೂ ಸಡಗರದಿಂದ ನಡೆಯುತ್ತಿದೆ.

ಹೆಬ್ಬಸೂರು ಗ್ರಾಮದ ಗೌಡಿಕೆ ಮಾದೇಶ್ ಮಾತನಾಡಿ, ಗ್ರಾಮದಲ್ಲಿ ವರ್ಷ ವರ್ಷವೂ ಈ ಹೊನ್ನೀರು ಕಟ್ಟುವ ಆಚರಣೆಯನ್ನು ಎಲ್ಲರೂ ಸೇರಿ ಮಾಡಿಕೊಂಡು ಬಂದಿದ್ದೇವೆ. ಇದರ ಉದ್ದೇಶ ಏನೆಂದರೆ ಗ್ರಾಮಕ್ಕೆ ಒಳ್ಳೆಯದಾಗಲಿ ಗ್ರಾಮದ ಜನರಿಗೆ ಹಾಗೂ ಎಲ್ಲರಿಗೂ ಒಳ್ಳೆಯದಾಗುತ್ತದೆ ಎಂಬ ನಂಬಿಕೆ. ಹೊನ್ನೇರು ಕಟ್ಟಿದ ಎತ್ತಿನಗಾಡಿಯನ್ನು ನಮ್ಮ ನಮ್ಮ ಜಮೀನುಗಳಿಗೆ ಗದ್ದೆಗಳಿಗೆ ಕರೆದುಕೊಂಡು ಹೋಗಿ ಅದರಲ್ಲಿ ತಂದಿರುವ ಗೊಬ್ಬರವನ್ನು ನಮ್ಮ ಗದ್ದೆ ಜಮೀನುಗಳಿಗೆ ಎರಚಿದರೆ ಒಳ್ಳೆಯ ಫಸಲು ಒಳ್ಳೆಯ ಲಾಭ ದೊರೆಯುತ್ತದೆ ಎಂಬ ನಂಬಿಕೆ ಇದೆ ಎಂದು ತಿಳಿಸಿದರು.

# ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವಂತೆ ಶಾಸಕ ಮಂಜು ಆಗ್ರಹ

**ಕೆ.ಆರ್.ಪೇಟೆ.ಮಾ.20:** ತಾಲೂಕಿನ ಬಹುತೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದು ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಕ್ರಮವಹಿಸುವಂತೆ ಶಾಸಕ ಹೆಚ್.ಟಿ.ಮಂಜು ರಾಜ್ಯ ವಿಧಾನ ಸಭೆಯಲ್ಲಿ ಆಗ್ರಹಿಸಿದರು.

ತಾಲೂಕಿನ ಕುಡಿಯುವ ನೀರಿನ ಸಮಸ್ಯೆಯನ್ನು ಎಳೆ ಎಳೆಯಾಗಿ ಸಭಾಧ್ಯಕ್ಷರ ಮುಂದಿಟ್ಟ ಶಾಸಕ ಹೆಚ್.ಟಿ.ಮಂಜು ಕೆ.ಆರ್.ಪೇಟೆ ಪಟ್ಟಣಕ್ಕೆ ಹೊಂದಿಕೊಂಡಂತೆ ಕರ್ನಾಟಕ ಗೃಹ ಮಂಡಳಿಯ ಬಡಾವಣೆ, ಸರ್ಕಾರಿ ನೌಕರರ ಬಡಾವಣೆ ಮತ್ತು ಜಯನಗರ ಬಡಾವಣೆಗೆ ಹೊಂದಿಕೊಂಡಂತೆ ಕೆಲವು ಬಡಾವಣೆಗಳು ನಿರ್ಮಾಣಗೊಂಡಿವೆ. ಹೌಸಿಂಗ್ ಬೋರ್ಡ್ ಕಾಲೋನಿ ಹಿರೀಕಳೆ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸೇರಿದ್ದರೆ, ಸರ್ಕಾರಿ ನೌಕರರ ಬಡಾವಣೆ ಮಾಕವಳ್ಳಿ ಗ್ರಾಮ ಪಂಚಾಯತಿಗೆ ಸೇರಿದೆ. ಜಯನಗರ ಬಡಾವಣೆಗೆ ಹೊಂದಿಕೊಂಡಂತಿರುವ ಬಡಾವಣೆಗಳು ಮುರುಕನಹಳ್ಳಿ ಗ್ರಾಮ ಪಂಚಾಯತಿಯ ನಾಗೇನಹಳ್ಳಿ ಎಲ್ಲೆಗೆ ಸೇರಿವೆ. ಈ ಮೂರು ಬಡಾವಣೆಗಳು ಗ್ರಾ.ಪಂ ವ್ಯಾಪ್ತಿಗೆ ಸೇರಿದ್ದರೂ ಕೆ.ಆರ್.ಪೇಟೆ ಪಟ್ಟಣಕ್ಕೆ ಹೊಂದಿಕೊಂಡಿವೆ. ಈ ಬಡಾವಣೆಗಳಿಗೆ ಜಲ ಜೀವನ್ ಮಿಷನ್ ಯೋಜನೆಯಿಂದಾಗಲೀ ಅಥವಾ ಗ್ರಾಮ ಪಂಚಾಯತಿಯಿಂದಾಗಲಿ ಕುಡಿಯುವ ನೀರು ಪೂರೈಕೆ ವ್ಯವಸ್ಥೆಯಿಲ್ಲ. ಈ ಬಗ್ಗೆ ಜಿಲ್ಲಾ ಕೆ.ಡಿ.ಪಿ ಸಭೆಯಲ್ಲಿಯೂ ಪ್ರಸ್ತಾಪಿಸಿದ್ದು ಈ ಮೂರು ಬಡಾವಣೆಗಳು ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವಂತೆ ಗಮನ ಸೆಳೆದಿದ್ದೇನೆ. ಆದರೂ ಯಾವುದೇ ಪ್ರಯೋಜನವಾಗಿಲ್ಲ. ತಾಲೂಕಿನ ರಾಯಸಮುದ್ರ ಗ್ರಾಮದಲ್ಲಿ ಸುಮಾರು 3 ರಿಂದ 4 ಸಾವಿರ ಜನ ವಾಸಿಸುತ್ತಿದ್ದಾರೆ.

ಈ ಗ್ರಾಮದಲ್ಲಿನ ಹಳೆಯ ಬೋರ್ ವೆಲ್ ಫ್ಲೋರೈಡ್ ಸಮಸ್ಯೆಯಿದ್ದು ಜನರಿಗೆ ನಿರುಪಯುಕ್ತವಾಗಿದೆ. ಹೊಸದಾಗಿ ಬೋರ್‌ವೆಲ್ ಕೊರೆಸಲು ಅವಕಾಶವಿಲ್ಲ. ಈ ಭಾಗದಲ್ಲಿ ಜನಬಳಕೆಗೆ ಅಗತ್ಯ ನೀರು ಪಡೆಯಲು ಖಾಸಗಿ ಬೋರ್‌ವೆಲ್ ಗಳೂ ಲಭ್ಯವಿಲ್ಲ. 4 ಸಾವಿರ ಜನಸಂಖ್ಯೆಯಿರುವ ಗ್ರಾಮಕ್ಕೆ ಒಬ್ಬ ವ್ಯಕ್ತಿಗೆ ಕನಿಷ್ಠ 55 ಲೀಟರ್ ನಂತೆ ಲೆಕ್ಕ ಹಾಕಿದರೂ ನಿತ್ಯ 70–80 ಟ್ಯಾಂಕರ್ ನೀರು ಪೂರೈಕೆ ಮಾಡಬೇಕಾಗುತ್ತದೆ.



ಇದು ಆರ್ಥಿಕವಾಗಿ ಗ್ರಾಮ ಪಂ ಗಳಿಂದ ಭರಿಸಲಾಗುವುದಿಲ್ಲ. ಈ ಹಿಂದೆ ಬೋರ್ ವೆಲ್ ಕೊರೆದಿರುವ ಗುತ್ತಿಗೆದಾರರಿಗೆ 3–4 ವರ್ಷಗಳಿಂದ ಹಣ ಪಾವತಿಸಿಲ್ಲ. ಇದರಿಂದಾಗಿ ಹೊಸದಾಗಿ ಬೋರ್ ವೆಲ್ ಕೊರೆಯಲು ಗುತ್ತಿಗೆದಾರರು ಮುಂದಾಗುತ್ತಿಲ್ಲ. ಎಲ್ಲ ವೆಚ್ಚಗಳು ಹೆಚ್ಚಾಗಿರುವ ಕಾರಣದಿಂದ ಹಳೆಯ ರೇಟ್ ಪ್ರಕಾರ ಬೋರ್ ವೆಲ್ ಕೊರೆಯಲು ಸಾಧ್ಯವಿಲ್ಲ ಎಂದು ಗುತ್ತಿಗೆದಾರರು ಹೇಳುತ್ತಿದ್ದಾರೆ. ಬಹುಗ್ರಾಮ ಕುಡಿಯುವ ನೀರು ಪೂರೈಕೆ ಯೋಜನೆಯಡಿ ಹೇಮಾವತಿ ನದಿಯಿಂದ ಜಲ ಜೀವನ್ ಮಿಷನ್ ಯೋಜನೆ ಮೂಲಕ ಸಮರ್ಪಕ ನೀರು ಪೂರೈಕೆಯಾಗುತ್ತಿಲ್ಲ.

ಜೆ.ಜೆ.ಎಂ ಯೋಜನೆಯಡಿಯಲ್ಲಿ ಎರಡು ಬೋರ್ ವೆಲ್ ಕೊರೆಯಲು ಅವಕಾಶವಿದೆ. ಆದರೆ ಇವರು ಕೊರೆಸಿದ ಬೋರ್ ವೆಲ್ ಗಳಲ್ಲಿ ನೀರು ಬರದಿದ್ದರೆ ಪರ್ಯಾಯವಾಗಿ ಹೊಸ ಬೋರ್ ಕೊರೆಯಲು ಅವಕಾಶವಿಲ್ಲ. ಜೆಜೆಎಂ ಗುತ್ತಿಗೆ ಕಾಮಗಾರಿ ಪಡೆದಿರುವ ಎಲ್ &ಟಿ ಕಂಪನಿ ನಿಯಮಾನುಸಾರ 22–01–2025 ರ ಅವಧಿಯೊಳಗೆ ಕಾಮಗಾರಿ ಮುಗಿಸಬೇಕಾಗಿತ್ತು. ಆದರೆ ಇದುವರೆಗೆ ಅದು ಸೇ 60 ರಷ್ಟು ಕಾಮಗಾರಿಯನ್ನೂ ಮುಗಿಸಿಲ್ಲ. ಆದರೆ ಕಾಮಗಾರಿ ಬಿಲ್ ಪಡೆಯಲು ಒತ್ತಾಯಿಸುತ್ತಿದೆ. ಸ್ಥಳೀಯ ಆರ್.ಡಿ.ಪಿ.ಐ ಅಧಿಕಾರಿಗಳ ಮಾತನ್ನೂ ಕಂಪನಿ ಕೇಳುತ್ತಿಲ್ಲ. ಕಾಮಗಾರಿ ಮುಗಿಸದೆ ಬಿಲ್ ಬರೆಯಲು ಒತ್ತಾಯಿಸುತ್ತಿರುವ ಎಲ್&ಟಿ ಏಜೆನ್ಸಿ ರದ್ದುಪಡಿಸುವಂತೆ ಶಾಸಕ ಹೆಚ್.ಟಿ.ಮಂಜು ಆಗ್ರಹಿಸಿದರು.

ಶಾಸಕರ ಪ್ರಶ್ನೆಗಳಿಗೆ ಉತ್ತರಿಸಿದ ರಾಜ್ಯ ಪಂಚಾಯತ್ ಮತ್ತು ಗ್ರಾಮೀಣ ಅಭಿವೃದ್ಧಿ ಸಚಿವ ಪ್ರಿಯಾಂಕ ಖರ್ಗೆ 2017 ರಲ್ಲಿಯೇ ಹೌಸಿಂಗ್ ಬೋರ್ಡ್ ಕಾಲೋನಿಯನ್ನು ಹಿರೀಕಳಲೆ ಗ್ರಾ.ಪಂ ಗೆ ಹಸ್ತಾಂತರಿಸಿದ್ದು ಅವರು ಅಲ್ಲಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದಾರೆ. ಗ್ರಾ.ಪಂ ಗೆ ಹಸ್ತಂತರವಾದಾಗ ಅಲ್ಲಿ ಕೇವಲ 20 ಮನೆಗಳಿದ್ದು ಈಗ ಅದರ ಸಮಖ್ಯೆ 100 ದಾಟಿದೆ. ಮುರುಕನಹಳ್ಳಿ ಗ್ರಾ.ಪಂ ವ್ಯಾಪ್ತಿಯ ನಾಗೇನಹಳ್ಳಿ ಎಲ್ಲೆಯಲ್ಲಿ ಪಟ್ಟಣಕ್ಕೆ ಹೊಂದಿಕೊಂಡಂತೆ 20–30 ಮನೆಗಳು ತಲೆ ಎತ್ತಿದ್ದು ಇವುಗಳಿಗೆ ಅಗತ್ಯ ರಸ್ತೆ, ಕುಡಿಯುವ ನೀರು ಮತ್ತಿತರ ಮೂಲಭೂತ ಸೌಲಭ್ಯಗಳಿಲ್ಲ. ಇದಕ್ಕಾಗಿ 14 ಲಕ್ಷ ರೂ ಎಸ್ಟಿಮೇಟ್ ಮಡಲಾಗಿದೆ. ಆದರೆ ಇಲ್ಲಿನ ಕುಡಿಯುವ ನೀರಿಗೆ ಅಗತ್ಯವಾದ ಹಣವನ್ನು ಯಾವ ನಿಧಿಯಿಂದ ಭರಿಸಬೇಕೆಂದು ನಿರ್ಧರಿಸಬೇಕಾಗಿದ್ದು ಶೀಘ್ರದಲ್ಲಿಯೇ ಸಮಸ್ಯೆ ಪರಿಹಾರಕ್ಕೆ ಕ್ರಮ ವಹಿಸುವುದಾಗಿ ತಿಳಿಸಿದರು.

ಅಗತ್ಯವಿರುವ ಕಡೆ ಹೊಸದಾಗಿ ಬೋರ್ ವೆಲ್ ಕೊರೆಸಲು ಟಾಸ್ಕ್ ಫೋರ್ಸ್ ರಚಿಸಲಾಗುತ್ತಿದ್ದು ಇದಕ್ಕೆ ಶಾಸಕರೆ ಅಧ್ಯಕ್ಷರಾಗಿರುತ್ತಾರೆ. ಟಾಸ್ಕ್ ಫೋರ್ಸ್ ಅನುಮೋಧನೆಯಿಲ್ಲದೆ ಹೊಸ ಬೋರ್ ಕೊರೆಸಲು ಅವಕಾಶವಿಲ್ಲ. ಈ ಹಿಂದೆ ಯಾವುದೇ ಅನುಮೋದನೆ ಪಡೆಯದೆ ಬೇಕಾಬಿಟ್ಟಿ ಬೋರ್ ಕೊರೆಸಲಾಗಿದೆ. ಹಳೆಯ ಬೋರ್ ವೆಲ್ ಗುತ್ತಿಗೆದಾರರಿಗೆ ಸುಮಾರು 88 ಕೋಟಿ ಬಾಕಿ ಪಾವತಿಸಬೇಕಾಗಿದೆ. ನೀರಾವರಿ, ಗ್ರಾಮೀಣ ಅಭಿವೃದ್ಧಿ ಇಲಾಖೆ ಮತ್ತು ಕೃಷಿ ಇಲಾಖೆಗಳ ಜಂಟಿ ಸಮಿತಿ ರಚಿಸಿ ಆಯಾ ಭಾಗದಲ್ಲಿ ಉದ್ಭವಿಸಬಹುದಾದ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಕ್ರಮ ವಹಿಸುವುದಾಗಿ ಸಚಿವ ಪ್ರಿಯಾಂಕ್ ಖರ್ಗೆ ಉತ್ತರಿಸಿದರು.

# ಸೌಲಭ್ಯಗಳ ಪರಿಶೀಲನೆ



**ಗದಗ, ಮಾ20:** ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಗೌರವಾನ್ವಿತ ನ್ಯಾಯಾಂಗ ಸದಸ್ಯರಾದ ಎಸ್.ಕೆ. ವಂಟಿಗೊಡಿ ಅವರು ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಭೇಟಿ ನೀಡಿ ಶಾಲೆಯ ಕಾರ್ಯನಿರ್ವಹಣೆ ಮತ್ತು ಸೌಲಭ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿದರು.

ವಸತಿ ಶಾಲೆಗೆ ಆಗಮಿಸಿದ ಎಸ್.ಕೆ. ವಂಟಿಗೊಡಿ ಅವರು ಭೋಜನಾಲಯಕ್ಕೆ ಭೇಟಿ ನೀಡಿ ಅಡುಗೆ ಸಿಬ್ಬಂದಿಯೊಂದಿಗೆ ಮಾತನಾಡುತ್ತಾ ವಸತಿ ಶಾಲೆಯಲ್ಲಿ ದಿ 28–07–2025 ರಂದು ನಡೆದ ಘಟನೆಯಿಂದ ವಸತಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಊಟದ ತೊಂದರೆ ಉಂಟಾಗಿರುವ ಕುರಿತು ಹೇಳುತ್ತಾ ಇನ್ನು ಮುಂದೆ ಅಂತಹ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ನೀಡಿದರು. ಊಟದ ರುಚಿಯನ್ನು ಸ್ವತಃ ಪರೀಕ್ಷಿಸಿ, ಮೆನು ಚಾರ್ಟ್ ಪ್ರಕಾರ ರುಚಿಯಾದ, ಶುಚಿಯಾದ ಮತ್ತು ಪೌಷ್ಟಿಕ ಆಹಾರವನ್ನು ವಸತಿ ನಿಲಯದ ವಿದ್ಯಾರ್ಥಿಗಳಿಗೆ ನೀಡುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ನಂತರ ದಾಸ್ತಾನು ಕೊಠಡಿಯಲ್ಲಿ ಆಹಾರ ಧಾನ್ಯಗಳನ್ನು ಪರಿಶೀಲಿಸಿದರು.

ವಿದ್ಯಾರ್ಥಿನಿಲಯದ ಪ್ರತಿ ಕೊಠಡಿಗೆ ಭೇಟಿ ನೀಡಿದ ಅವರು ವಿದ್ಯಾರ್ಥಿಗಳ ಸಂಖ್ಯೆ, ಫ್ಯಾನ್, ಲೈಟ್ ಹಾಗೂ ಇತರೆ ಮೂಲಭೂತ ಸೌಲಭ್ಯಗಳ ಬಗ್ಗೆ ವಿಚಾರಿಸಿದರು. ಶೌಚಾಲಯಗಳ ಸ್ವಚ್ಛತೆಯನ್ನು ವೀಕ್ಷಿಸಿದರು. ಎಲ್ಲವೂ ಸರಿ ಇರುವ ಬಗ್ಗೆ ಪ್ರಶಂಸೆ ವ್ಯಕ್ತಪಡಿಸುತ್ತಾ ವಿದ್ಯಾರ್ಥಿನಿಯರಿಗೆ ಬಿಸಿ ನೀರಿನ ಸೌಲಭ್ಯ ಗಳ ಬಗ್ಗೆ ಕೇಳಿದಾಗ ಪ್ರಾಂಶುಪಾಲರು ಸೋಲಾರ ವ್ಯವಸ್ಥೆ ಇರುವುದಾಗಿ ತಿಳಿಸಿದರು.

ಶಾಲೆಯಲ್ಲಿ ಸೋಲಾರ್ ವ್ಯವಸ್ಥೆ ಇದ್ದರೂ, ಮಳೆಗಾಲದಲ್ಲಿ ಬಿಸಿನೀರಿನ ತೊಂದರೆಯಾಗದಂತೆ ಗೀಸರ್‌ಗಳನ್ನು ಅಳವಡಿಸಲು ಸೂಚಿಸಿದರು. ವಿದ್ಯಾರ್ಥಿಗಳಿಗೆ ಕಾಲಕಾಲಕ್ಕೆ ವಿಟಮಿನ್–ಸಿ ಮತ್ತು ಕ್ಯಾಲ್ಸಿಯಂ ಮಾತ್ರೆಗಳನ್ನು ನೀಡಲಾಗುತ್ತಿದೆಯೇ ಎಂದು ಖಚಿತಪಡಿಸಿಕೊಂಡರು. ವಿದ್ಯುತ್ ವ್ಯತ್ಯಯವಾದಾಗ ಯುಪಿಎಸ್ ಹಾಗೂ ಜನರೇಟರ್ ಬಳಕೆ ಮಾಡುವ ಬಗ್ಗೆ ಮಾಹಿತಿ ಪಡೆದರು.

ವಸತಿ ಶಾಲೆಯ ಆವರಣದಲ್ಲಿ ವಿದ್ಯಾರ್ಥಿಗಳು ಕುಳಿತುಕೊಳ್ಳಲು ಅನುಕೂಲವಾಗುವಂತೆ ಸಿಮೆಂಟ್ ಬೆಂಚುಗಳನ್ನು ಹಾಕಿಸಲು ಹಾಗೂ ಶಾಲೆಯ ಆವರಣವನ್ನು ಇನ್ನಷ್ಟು ಸುಂದರಗೊಳಿಸಲು ಗಿಡಗಳನ್ನು ನೆಟ್ಟು ಪೊ?ಷಿಸುವಂತೆ ತಿಳಿಸಿದರು. ಸಿ.ಸಿ. ಕ್ಯಾಮರಾ ಅಳವಡಿಸಿರುವ ಬಗ್ಗೆ ಮಾಹಿತಿಯನ್ನು ಪಡೆಯುತ್ತಾ ವಸತಿ ಶಾಲೆಯ ಸುತ್ತಮುತ್ತಲಿನ ಪ್ರದೇಶವನ್ನು ಕಾಣಿಸುವಂತೆ ಸಿ.ಸಿ. ಕ್ಯಾಮರಾ ಅಳವಡಿಸಲು ವ್ಯವಸ್ಥೆ ಮಾಡಿಕೊಳ್ಳಲು ತಿಳಿಸಿದರು. ವಸತಿ ಶಾಲೆಯ ಪಾಲಕರು ತಮ್ಮ ಮಕ್ಕಳ ಭೇಟಿಗಾಗಿ ಬಂದಾಗ ಮಕ್ಕಳೊಂದಿಗೆ ಕುಳಿತುಕೊಳ್ಳಲು ಅನುಕೂಲವಾಗುವಂತೆ ಕಟ್ಟಡದ ವ್ಯವಸ್ಥೆ ಮಾಡಿದರೆ ವಸತಿ ಶಾಲೆಯಲ್ಲಿ ಜರುಗುವ ಕಾರ್ಯಕ್ರಮಗಳನ್ನು ಮಾಡಲು ಅನುಕೂಲವಾಗುತ್ತದೆ. ವಸತಿ ಶಾಲೆಯು ಬಾಲಕಿಯರ ವಸತಿ ಶಾಲೆಯಾಗಿರುವುದರಿಂದ ಕಂಪೌಂಡ್ ಅವಶ್ಯಕವಿದ್ದು , ಸಿ.ಸಿ.ರಸ್ತೆ ಇವೆಲ್ಲವುಗಳ ಕುರಿತು ಬೇಡಿಕಯನ್ನು ಸಲ್ಲಿಸಿದಲ್ಲಿ ಮಾನ್ಯರು ಕೇಂದ್ರ ಕಚೇರಿಯ ಅಧಿಕಾರಿಗಳೊಂದಿಗೆ ಮಾತನಾಡಿ ಬೇಗನೆ ಸರಿಪಡಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಶ್ರೀಮತಿ ನಂದಾ ಹಣಬರಟ್ಟಿ, ಶಿರಹಟ್ಟಿ ತಹಶೀಲ್ದಾರ್ ರಾಘವೇಂದ್ರ ರಾವ್, ಪಿ.ಎಸ್‌ಐ ಆಯ್. ಆರ್. ರೀತ್ತಿ, ಇ. ಓ ರಾಮಣ್ಣ ದೊಡ್ಮನಿ, ಬಿ.ಇ. ಓ ನಾಣ್ಕಿ ನಾಯಕ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಗೋಪಾಲ ಲಮಾಣಿ, ಗದಗ ಜಿಲ್ಲಾ ವಸತಿ ಶಾಲೆಗಳ ಮತ್ತು ಕಾಲೇಜು ಜಿಲ್ಲಾ ಸಮನ್ವಯ ಅಧಿಕಾರಿ ಹಾಗೂ ಪ್ರಾಂಶುಪಾಲರು ಶ್ರೀಮತಿ ಸುನೀತಾ ವಾಲಿಶೆಟ್ಟರ್ ಹಾಗೂ ವಸತಿ ಶಾಲೆಯ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಕಿವಿನೋವಿಗೆ ಪರಿಹಾರ



ಕಿವಿನೋವು ಬಂತೆಂದರೆ ತುಂಬ ಕಿರಿಕಿರಿ ಮತ್ತು ಅಸಹನೀಯ. ಸಿಪ್ಪೆ ಸುಲಿದಬೆಳ್ಳುಳ್ಳಿಯನ್ನು ಚೆನ್ನಾಗಿ ಕತ್ತರಿಸಿ, ಎಳ್ಳಿನ ಎಣ್ಣೆಯಿಂದ ಬಿಸಿ ಮಾಡಿ.
ಬಿಸಿ ಎಣ್ಣೆ ತಣಿದ ನಂತರ 2–3 ಹನಿಯನ್ನು ಕಿವಿಯೊಳಗೆ ಹಾಕಿದರೆ ಕಿವಿ ನೋವು ವಾಸಿಯಾಗುತ್ತದೆ.
ಬೆಳ್ಳುಳ್ಳಿಯನ್ನು ಹರಳೆಣ್ಣೆಯಲ್ಲಿ ಹುರಿದು, ಆರಿದ ನಂತರ ಕಿವಿಗೆ ಒಂದೊಂದೇ ಹನಿ ಬಿಡುತ್ತಿದ್ದರೆ ಸಹ ಕಿವಿನೋವು ಕಡಿಮೆಯಾಗುವುದು.
ಈರುಳ್ಳಿ ರಸವನ್ನು ಬಿಸಿ ಮಾಡಿ, ಆರಿಸಿ ಕೆಲವು ಹನಿಗಳನ್ನು ಕಿವಿಯೊಳಗೆ ಬಿಟ್ಟುಕೊಳ್ಳಿ. ದಿನದಲ್ಲಿ 2–3 ಸಲ ಹೀಗೆ ಮಾಡಿ.
ನೇರವಾಗಿ ಕಿವಿಯೊಳಗೆ ಕೆಲವು ಹನಿ ಶುಂಠಿ ರಸ ಹಾಕಿ ಅಥವಾ ಅಥವಾ ಶುಂಠಿಯನ್ನು ಆಲಿವ್ ಎಣ್ಣೆಯಲ್ಲಿ ಹಾಕಿ 10 ನಿಮಿಷ ಬಿಟ್ಟು ಕೆಲವು ಹನಿಯನ್ನು ಕಿವಿಯಲ್ಲಿ
ಅಡುಗೆ ಉಪ್ಪನ್ನು ನೀರಿನಲ್ಲಿ ಕರಗಿಸಿ ಉಗುರು ಬೆಚ್ಚಗೆ ಮಾಡಿ ಕಿವಿಗೆ ಬಿಡುವುದರಿಂದ ಯಾವುದೇ ಕೀಟ ಒಳಗೆ ಹೋಗಿದ್ದರೂ
ಇಲ್ಲವೇ ಹೊರಬರುವುದು, ಅಲ್ಲಿಯೇ ಸಾಯುವುದು.
ಸ್ವಲ್ಪ ಓಂಕಾಳನ್ನು ಒಂದು ಚಮಚ ಕೊಬ್ಬರಿ ಎಣ್ಣೆಯೊಂದಿಗೆ ಕುದಿಸಿ, ಬೆಚ್ಚನೆಯ ಎಣ್ಣೆಯನ್ನು ಕಿವಿಗೆ ತೊಟ್ಟು ತೊಟ್ಟಾಗಿ ಬಿಡುವುದರಿಂದ ಕಿವಿಯಲ್ಲಿ ಉಂಟಾದ ಕಜ್ಜಿ, ಕುರ ವಾಸಿಯಾಗುವುದು.
ಕಿವಿಹುಣ್ಣಾದಾಗ,ಸೋರುತ್ತಿರುವಾಗ ತುಳಸಿ ಎಲೆಯ ರಸವನ್ನು ತೆ–ಗೆದು, ಕಿವಿಯೊಳಗೆ ಹಿಂಡುತ್ತಿದ್ದರೆ ಕಿವಿನೋವು ಕಡಿಮೆಯಾಗುವುದು.
ಬಾಣಂತಿಯರು ಬೆಳ್ಳುಳ್ಳಿಯ ಚೂರುಗಳನ್ನು ಹತ್ತಿಯಲ್ಲಿ ಸುತ್ತಿ, ಕಿವಿಯಲ್ಲಿ ಇಟ್ಟುಕೊಂಡಂರೆ ಶೀತದಿಂದ ಕಿವಿ ಕಿವುಡಾಗುವುದು ತಪ್ಪುತ್ತದೆ.
ಹಸಿ ಮೂಲಂಗಿಯನ್ನು ಸೇವಿಸುವುದರಿಂದಲೂ ಕಿವಿಗೆ ಸಂಬಂಧಪಟ್ಟ ಕಾಯಿಲೆ ಬರುವ ಸಾಧ್ಯತೆ ಕಡಿಮೆಯಾಗುತ್ತದೆ.

ಗೌರಮ್ಮನ ಆರೋಗ್ಯ ಸೂತ್ರಗಳು ಪ್ರಿಸ್ಟ್ ಬುಕ್ಸ್ ಪ್ರೈವೇಟ್ ಲಿಮಿಟೆಡ್ ವತಿಯಿಂದ ಪ್ರಕಟಣೆ
ಡಾ. ಗೌರಿ ಸುಬ್ರಮಣ್ಯ ಆಯುರ್ವೇದ ತಜ್ಞರು ಮತ್ತು ಧರ್ಮದರ್ಶಿಗಳು ಮುಕ್ತಿನಾಗ ದೇವಸ್ಥಾನ ಫೋನ್ ನಂ.
9535383921.

# ಒಳ ಮೀಸಲಾತಿ ರದ್ದಿಗೆ ಆಗ್ರಹಿಸಿ ಮಾ.24 ರಂದು ಬೆಂಗಳೂರಿನಲ್ಲಿ ಬೃಹತ್ ತಿಭಟನೆ




**ಬಳ್ಳಾರಿ:ಮಾ,20–** ಎಸ್ಸಿ ಒಳ ಮೀಸಲಾತಿಯಲ್ಲಿ ಸಿ.ಕೆಟಗೆರಿಯಿಂದ ಕೊರಚ–ಕೊರಮ, ಲಂಬಾಣಿ, ಭೋವಿ ಸಮಾಜಗಳನ್ನು ಒಳಗೊಂಡ 65 ಜಾತಿಗಳಿಗೆ ತೀವ್ರ ಅನ್ಯಾಯವಾಗುತ್ತಿದೆ. ಅದಕ್ಕಾಗಿ ಒಳಮೀಸಲಾತಿ ರದ್ದುಮಾಡಿ ಈ ಹಿಂದಿನ ಮೀಸಲಾತಿಯಂತೆ ನೇಮಕಾತಿ ಮಾಡಬೇಕೆಂದು ಮಾ.24 ರಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದೆ.

ಈ ಕುರಿತು ಕರ್ನಾಟಕ ರಾಜ್ಯ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಜಿಲ್ಲಾ ಘಟಕ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ತಿಳಿಸಿದೆ. ಎ.ಬಿ.ಸಿ ವರ್ಗೀಕರಣದಲ್ಲಿ ನಡೆಯುವ ನೇಮಕಾತಿಯಿಂದ ನಮ್ಮ ಸಮಾಜಕ್ಕೆ ಮೀಸಲಾತಿ ದೊರೆಯುವುದೇ ದುರ್ಲಬ ಆಗುತ್ತದೆ. ಇತ್ತೀಚೆಗೆ ಧಾರವಾಡ ವಿವಿ. ಅರೋಗ್ಯ ವಿಶ್ವವಿದ್ಯಾಲಯ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಆರೋಗ್ಯ ಇಲಾಖೆಗಳಲ್ಲಿ ನಡೆಸಲಾದ ನೇಮಕಾತಿಗಳಲ್ಲಿ ಸಿ ಗುಂಪಿಗೆ ಅನ್ಯಾಯ ಆಗಲಿದೆಂದು ಹೇಳಿದಾಗ ಸರ್ಕಾರ ತನ್ನ ನಿರ್ಧಾರ ಬದಲಿಸಿದೆ.

ಒಳ ಮೀಸಲಾತಿಯನ್ನು ಜಾರಿಗೊಳಿಸಲು ರೂಪಿಸಿದ ರೋಸ್ಟರ್ ಕೋಷ್ಟಕ ದೋಷಪೂರ್ಣವಾಗಿದ್ದು, ಅದನ್ನು ರದ್ದು ಮಾಡಿ ಮೂರು ಪ್ರವರ್ಗಗಳಿಗೂ ಸಮಾನವಾಗಿ ನ್ಯಾಯ ಸಿಗುವ ರೀತಿಯಲ್ಲಿ ಪರಿಷ್ಕೃತ ಆದೇಶವನ್ನು ಹೊರಡಿಸಬೇಕು. ಅಲ್ಲಿಯವರೆಗೆ ಎಲ್ಲಾ ಹುದ್ದೆಗಳ ನೇಮಕಾತಿ ಮಾಡಲು ಹಳೆಯ ಮೀಸಲಾತಿಯ ಜಾರಿಗೊಳಿಸಲು ಆಳವಡಿಸಿಕೊಂಡಿದ್ದ ರೊಸ್ಟರ್ ಪದ್ದತಿಯನ್ನೇ ಮುಂದು ವರಿಸಬೇಕು.

ಒಳಮೀಸಲಾತಿ ರದ್ದುಪಡಿಸಿ ಹಿಂದೆ ಇರುವಂತಹ ವ್ಯವಸ್ಥೆಯನ್ನು ಮುಂದುವರೆಸಿ, ನೇಮಕಾತಿಯನ್ನು ಮಾಡಬೇಕು. ಎಬಿಸಿ ವರ್ಗಗಳನ್ನು ರದ್ದುಗೊಳಿಸಿ ಈ ಹಿಂದೆ ಇರುವಂತ ವ್ಯವಸ್ಥೆಯಲ್ಲಿ ನೇಮಕಾತಿಯನ್ನು ಮಾಡಬೇಕು. ಕೇಂದ್ರ ಸರ್ಕಾರ ಜನಗಣತಿಯನ್ನು ಪ್ರಾರಂಭ ಮಾಡಿದೆ. ಜನಗಣತಿ ಸಂಪೂರ್ಣ ಮುಗಿಯುವವರೆಗೂ ಅವೈಜ್ಞಾನಿಕವಾಗಿ ಮಾಡಿದ ಒಳ ಮೀಸಲಾತಿಯನ್ನು ರದ್ದುಪಡಿಸಿ, ಕೇಂದ್ರ ಜನಗಣತಿ ಅಂಕಿ–ಅಂಶಗಳು ಬಂದ ನಂತರ ಸಂಖ್ಯೆಗನುಗುಣವಾಗಿ ಮೀಸಲಾತಿಯ ವಿಂಗಡಣೆ ಮಾಡಿದರೆ ಸಮಾಜಕ್ಕೆ ನ್ಯಾಯ ದೊರಕಿದಂತಾಗುತ್ತದೆ.

ದೇಶವ್ಯಾಪಿ ನಡೆಯಲಿರುವ ಜನಗಣತಿಯ ದತ್ತಾಂಶ ಬರುವವರಿಗೆ ಏಕಪಕ್ಷೀಯ ನಿರ್ಧಾರ ಮಾಡಬಾರದು. ರಾಜ್ಯದಲ್ಲಿ ಒಳ ಮೀಸಲಾತಿ ಹಂಚಿಕೆಯ ಪ್ರಕ್ರಿಯೆ ನಡೆಸುವ ಮುನ್ನ ಸಮುದಾಯಗಳ ಮುಖಂಡರೊಂದಿಗೆ ಸಮಾಲೋಚನೆ ನಡೆಸಬೇಕು. ಶೈಕ್ಷಣಿಕ, ವಸತಿ ನಿಲಯ ಪ್ರವೇಶ, ನೇಮಕಾತಿಗೆ ರೋಸ್ಟರ್ ಹಂಚಿಕೆ ಮಾಡಿ ಹೊರಡಿಸಿರುವ ಎಲ್ಲಾ ಆದೇಶಗಳನ್ನು, ಸುತ್ತೋಲೆಗಳನ್ನು ಹಿಂಪಡೆಯಬೇಕ ಈಗಾಗಲೇ ಹೊರಡಿಸಿರುವ ವಿವಿಧ ನೇಮಕಾತಿ ಅಧಿಸೂಚನೆಗಳನ್ನು ರದ್ದುಗೊಳಿಸಬೇಕು. ಹಳೆಯ ಜಾತಿ ಪ್ರಮಾಣ ಪತ್ರಗಳನ್ನು ಪರಿಗಣಿಸಬೇಕು ಎಂದು ಆಗ್ರಹಿಸಲಿದೆ. ಪ್ರತಿಭಟನೆಗೆ ಬಳ್ಳಾರಿ ಜಿಲ್ಲಾ ಕೊಲಂಭೋ ಸಮಾಜದಿಂದ 2 ಸಾವಿರಕ್ಕೂ ಹೆಚ್ಚು ಜನ ತೆರಳಲಿದೆಂದು ಒಕ್ಕೂಟದ ಗೌರವ ಅಧ್ಯಕ್ಷ ಡಾ.ಹನುಂಮತಪ್ಪ, ಅಧ್ಯಕ್ಷ ರಾಮುನಾಯ್ಕ, ಕಾರ್ಯದರ್ಶಿ ಮಹೇಶ್, ಭೋವಿ ಸಮಾಜದ ಜಿಲ್ಲಾ ಅಧ್ಯಕ್ಷ ವಿ.ರಾಮಾಂಜನೇಯಲು, ಲಂಬಾಣಿ ಸಮಾಜದ ಗೋಪಿನಾಯ್ಕ, ಡಾ.ಎಂ.ಟಿ.ಮಲ್ಲೇ ಶ್, ದೇವಣ್ಣ, ರಂಗಸ್ವಾಮಿ, ಪ್ರಕಾಶ್, ಹುಲುಗಪ್ಪ, ಸಂತೋಷ್ ಮೊದಲಾದವರು ಇದ್ದರು.

# ಭಾರ್ವ ಬೈಂಗನ್



**ಬೇಕಾಗುವ ಸಾಮಗ್ರಿಗಳು**
ಹಿ *ಬದನೆಕಾಯಿ – 1/4 ಕೆ.ಜಿ, ಅಚ್ಚಖಾರದ ಪುಡಿ –2 ಚಮಚ
ಹಿ *ಧನಿಯಾ ಪುಡಿ – 1 ಚಮಚ, *ಜೀರಿಗೆ ಪುಡಿ – 2 ಚಮಚ
*ಗರಂಮಸಾಲ–2 ಚಮಚ, *ಅಮ್‌ಚೂರ್ ಪುಡಿ –1ಚಮಚ
ಹಿ *ಬಾತ್ ಮಸಾಲ – 2 ಚಮಚ, *ಉಪ್ಪು – 2 ಚಮಚ
ಹಿ * –20., * 200 2.

**ಮಾಡುವ ವಿಧಾನ :** ಪ್ಯಾನ್‌ಗೆ ಎಣ್ಣೆ ಹಾಕಿ. ಬಿಸಿಯಾದ ಮೇಲೆ ಅಚ್ಚಖಾರದ ಪುಡಿ, ಧನಿಯಾ ಪುಡಿ, ಜೀರಿಗೆ ಪುಡಿ, ಗರಂ ಮಸಾಲ, ಅಮ್‌ಚೂರ್ ಪುಡಿ, ಬಾತ್ ಮಸಾಲ, ಉಪ್ಪು, ಹಾಕಿ ಹಸಿವಾಸನೆ ಹೋಗುವವರೆಗೆ ಸಣ್ಣ ಉರಿಯಲ್ಲಿ ಚೆನ್ನಾಗಿ ಹುರಿದು ಕೊಳ್ಳಿ. ಇದನ್ನು ಕತ್ತರಿದ ಬದನೆಕಾಯಿ ಮಧ್ಯೆ ತುಂಬಿ, ಕಾವಲಿನಲ್ಲಿ ಸ್ವಲ್ಪ ಎಣ್ಣೆ ಹಾಕಿ ಫ್ರೈ ಮಾಡಿ. ನಂತರ ಮುಚ್ಚಳ ಮುಚ್ಚಿ ಬೇಯಿಸಿದರೆ ಭಾರ್ವ ಬೈಂಗನ್ ರೆಡಿ.

# ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ಕ್ಷೇತ್ರಗಳ ಉಪಚುನಾವಣೆ : ಬಿಜೆಪಿ ಅಭ್ಯರ್ಥಿಗಳ ಹೆಸರು ಪ್ರಕಟ

**ಬೆಂಗಳೂರು,ಮಾ.20–** ರಾಜ್ಯದ ಕುತೂಹಲ ಕೆರಳಿಸಿರುವ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ಕ್ಷೇತ್ರಗಳ ಉಪಚುನಾವಣೆಗೆ ಬಿಜೆಪಿ ಹೈಕಮಾಂಡ್ ಅಭ್ಯರ್ಥಿಗಳ ಹೆಸರನ್ನು ಅಧಿಕೃತವಾಗಿ ಪ್ರಕಟಿಸಿದೆ. ಬಾಗಲಕೋಟೆಯಿಂದ ನಿರೀಕ್ಷೆಯಂತೆ ಮಾಜಿ ಶಾಸಕ ವೀರಭದ್ರಯ್ಯ ಚರಂತಿಮಠ ಅವರಿಗೆ ಟಿಕೆಟ್ ನೀಡಲಾಗಿದ್ದರೆ, ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಶ್ರೀನಿವಾಸ ಟಿ.ದಾಸಕರಿಯಪ್ಪ ಅವರಿಗೆ ಅವಕಾಶ ನೀಡುವ ಮೂಲಕ ಪಕ್ಷವು ಅಚ್ಚರಿಯ ನಡೆ ಪ್ರದರ್ಶಿಸಿದೆ. ದಾವಣಗೆರೆ ದಕ್ಷಿಣದಲ್ಲಿ ಬಿಜೆಪಿ ತನ್ನ ಅಭ್ಯರ್ಥಿಯಾಗಿ ಶ್ರೀನಿವಾಸ್ ದಾಸ ಕರಿಯಪ್ಪ ಅವರನ್ನು ಕಣಕ್ಕಿಳಿಸಿದೆ.

ಬಿ.ಜೆ.ಅಜಯ್ ಕುಮಾರ್ ಅವರಿಗೆ ಟಿಕೆಟ್ ನೀಡಬೇಕು ಎಂದು ಬಿಎಸ್ ಯಡಿಯೂರಪ್ಪ ಬಣ ಪಟ್ಟು ಹಿಡಿದಿತ್ತು. ಆದರೆ ಹೈಕಮಾಂಡ್ ಅಚ್ಚರಿಯ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ. ಇದು ಬಿಎಸ್‌ವೈ ಬಣಕ್ಕೆ ಆದ ಹಿನ್ನಡೆ ಎಂದೇ ವ್ಯಾಖ್ಯಾನಿಸಲಾಗುತ್ತಿದೆ.ದಾವಣಗೆರೆ ದಕ್ಷಿಣದಲ್ಲಿ ಜಾತಿ ಲೆಕ್ಕಾಚಾರದ ತಂತ್ರವನ್ನು ಬಿಜೆಪಿ ಹೆಣೆದಿದೆ. ಎಸ್‌ಟಿ ಸಮುದಾಯದ ಟಿ.ಶ್ರೀನಿವಾಸದಾಸ ಕರಿಯಪ್ಪಗೆ ಟಿಕೆಟ್ ನೀಡಿದೆ. ಈ ಮೂಲಕ ಅಹಿಂದ ಮತ್ತು ಲಿಂಗಾಯತ ವರ್ಗದ ಮತಗಳ ಮೇಲೆ ಪಕ್ಷ ಕಣ್ಣಿಟ್ಟಿದೆ.ಲಿಂಗಾಯತ ಸಮುದಾಯದ ಪ್ರಭಾವಿ ನಾಯಕ ವೀರಣ್ಣ ಚರಂತಿಮಠ್ ಅವರಿಗೆ ಬಿಜೆಪಿ ಮತ್ತೆ ಮಣೆ ಹಾಕಿದೆ.

ಕ್ಷೇತ್ರದಲ್ಲಿ ಲಿಂಗಾಯತ ಮತಗಳ ಪ್ರಾಬಲ್ಯ ಹೆಚ್ಚಿರುವುದರಿಂದ ಬಿಜೆಪಿ ಈ ನಿರ್ಧಾರ ತೆಗೆದುಕೊಂಡಿದೆ.ಕುರುಬ ಸಮುದಾಯದ ಜಿ.ಬಿ.ವಿನಯ್ ಕುಮಾರ್ ಅವರನ್ನು ಕಣಕ್ಕಿಳಿಸುವ ಬಗ್ಗೆ ಬಲವಾದ ಮಾತುಗಳು ಕೇಳಿ ಬರುತ್ತಿದ್ದವು. 2024 ರ ಲೋಕಸಭಾ ಚುನಾವಣೆಯಲ್ಲಿ ದಾವಣಗೆರೆ ಕ್ಷೇತ್ರದಿಂದ ಕಾಂಗ್ರೆಸ್



ಅಭ್ಯರ್ಥಿಯಾಗಲು ಪ್ರಯತ್ನಿಸಿ ವಿಫಲರಾದ ವಿನಯ್, ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ 42,907 ಮತಗಳನ್ನು ಗಳಿಸಿದ್ದರು. ದಾವಣಗೆರೆಗೆ ಅಚ್ಚರಿ ಅಭ್ಯರ್ಥಿ ಆದರೆ, ಅಚ್ಚರಿ ಎಂಬಂತೆ ಬಿಜೆಪಿ ಹೈ ಕಮಾಂಡ್ ಸ್ಥಳೀಯ ಬಣ ರಾಜಕೀಯ ಮಧ್ಯೆ ಎಸ್‌ಟಿ ಸಮುದಾಯದ ಶ್ರೀನಿವಾಸ ದಾಸ ಕರಿಯಪ್ಪರಿಗೆ ಮಣೆ ಹಾಕಿದೆ.
ದಾವಣಗೆರೆ ಜಿಲ್ಲೆಯ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ಸ್ಥಳೀಯ ಮುಖಂಡ ಅಜಯ್ ಕುಮಾರ್, ರಾಜೇನಹಳ್ಳಿ ಶಿವಕುಮಾರ್ ಸೇರಿದಂತೆ ಹಲವರು ಟಿಕೆಟ್ ರೇಸ್‌ನಲ್ಲಿದ್ದರು. ಆದರೆ, ಕೊನೆಯದಾಗಿ ಶ್ರೀನಿವಾಸ್ ದಾಸ ಕರಿಯಪ್ಪ ಟಿಕೆಟ್ ನೀಡಲಾಗಿದೆ.

ದಾವಣಗೆರೆ ಕ್ಷೆತ್ರದಲ್ಲಿ ಸಿದ್ದೇಶ್ವರ ಬಣದ ಶ್ರೀನಿವಾಸ್ ದಾಸ ಕರಿಯಪ್ಪಗೆ ಟಿಕೆಟ್ ನೀಡಿರುವುದು ಅಚ್ಚರಿ ಮೂಡಿಸಿದೆ. ದಾವಣಗರೆಯಲ್ಲಿ ಪ್ರಬಲ ಲಿಂಗಾಯತ, ಮರಾಠ ಸಮುದಾಯ ಬಿಟ್ಟು ಎಸ್‌ಟಿ ಸಮುದಾಯಕ್ಕೆ ಟಿಕೆಟ್ ಘೋಷಣೆ ಮಾಡಿರುವುದು ಕುತೂಹಲ ಕೆರಳಿಸಿದೆ.ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಸುಮಾರು 13 ಸಾವಿರ ಎಸ್ ಟಿ ಸಮುದಾಯದ ಮತಗಳಿವೆ. ಶ್ರೀನಿವಾಸ್ ದಾಸ ಬಿಜೆಪಿಯ ರಾಜ್ಯ ಎಸ್‌ಟಿ ಮೋರ್ಚಾ ಉಪಾಧ್ಯಕ್ಷರಾಗಿದ್ದಾರೆ. ಈ ಹಿಂದೆ ಚುನಾವಣೆಗಳಲ್ಲಿ ಟಿಕೆಟ್ ಆಕಾಂಕ್ಷಿಯಾಗಿದ್ದ ಅವರು, ಇತ್ತೀಚೆಗೆ ಪಕ್ಷೇತರರಾಗಿ ಸ್ಪರ್ಧೆ ಮಾಡುವ ಇಂಗಿತ ವ್ಯಕ್ತಪಡಿಸಿದ್ದರು.ಬಾಗಲಕೋಟೆಯಲ್ಲಿ ನಿರೀಕ್ಷೆಯಂತೆ ಚರಂತಿಮಠಗೆ ಟಿಕೆಟ್ ನೀಡಲಾಗಿದೆ. ಚರಂತಿಮಠ ಬಾಗಲಕೋಟೆ ಕ್ಷೇತ್ರದ ಮಾಜಿ ಶಾಸಕರಾಗಿದ್ದಾರೆ. ಬಾಗಲಕೋಟೆ ವಿಧಾನಸಭಾ ಕ್ಷೇತ್ರದಿಂದ ಅವರು ಮೂರು ಬಾರಿ ಶಾಸಕರಾಗಿದ್ದರು. ಬಾಗಲಕೋಟೆ ಉಪಚುನಾವಣೆಯಲ್ಲಿ ಸ್ಪರ್ಧಿಸಲು ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ, ಹಿಂದುಳಿದ ವರ್ಗಕ್ಕೆ ಸೇರಿದ ವೀರಣ್ಣ ಹಳೇಗೌಡರ ಸಹ ಟಿಕೆಟ್ ಆಕಾಂಕ್ಷಿಗಳಾಗಿದ್ದರು.

ಬಾಗಲಕೋಟೆಯಲ್ಲಿ ಅಭ್ಯರ್ಥಿ ಆಯ್ಕೆಯ ವಿಚಾರದಲ್ಲಿ ಬಿಜೆಪಿಯಲ್ಲಿ ಅಷ್ಟೊಂದು ಗೊಂದಲವಿರಲಿಲ್ಲ. ಲಿಂಗಾಯತ ಸಮುದಾಯದ ಚರಂತಿಮಠ ಅವರಿಗೆ ಟಿಕೆಟ್ ಬಹುತೇಕ ಖಚಿತ ಆಗಿತ್ತು. ಆದರೆ, ದಾವಣಗೆರೆಗೆ ಬಿಜೆಪಿಯ ಎರಡು ಬಣಗಳ ಮೇಲಾಟ ಜೋರಾಗಿತ್ತು ಮತ್ತು ಐವರು ಹೆಸರು ಕೇಳಿ ಬರುತ್ತಿತ್ತು. ಬಾಗಲಕೋಟೆಯಲ್ಲಿ ಆ ಭಾಗದ ವರ್ಚಸ್ವಿ ನಾಯಕ ಮುರುಗೇಶ್ ನಿರಾಣಿಗೆ ಟಿಕೆಟ್ ನೀಡಲು ಹೈಕಮಾಂಡ್ ಮುಂದೆ ಬಂದಿತ್ತು.

ಆದರೆ, ನಿರಾಣಿ ಸ್ಪರ್ಧೆ ಮಾಡಲು ಆಸಕ್ತಿಯನ್ನು ತೋರಿರಲಿಲ್ಲ. ಹಾಗಾಗಿ, ಪಿಎಚ್ ಪೂಜಾರ, ವೀರಣ್ಣ ಚರಂತಿಮಠ ಮತ್ತು ವೀರಣ್ಣ ಹಳೆಗೌಡರ ಹೆಸರು ಮುನ್ನೆಲೆಯಲ್ಲಿತ್ತು. ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ದಾವಣಗೆರೆ ದಕ್ಷಿಣ ಮತ್ತು ಎಚ್.ವೈ.ಮೇಟಿ ಅವರ ನಿಧನದಿಂದಾಗಿ ಬಾಗಲಕೋಟೆ ಉಪಚುನಾವಣೆ ನಡೆಯುತ್ತಿದೆ. ಏ. 9 ರಂದು ಉಪಚುನಾವಣೆಗೆ ಮತದಾನ ನಡೆಯಲಿದ್ದು, ಮೇ. 4 ರಂದು ಫಲಿತಾಂಶ ಪ್ರಕಟವಾಗಲಿದೆ.

# ಒಳ ಮೀಸಲಾತಿ ಬಲಗೈ ಸಮುದಾಯವನ್ನ ಮೂಲೆಗುಂಪು ಮಾಡುವ ಷಡ್ಯಂತ್ರ: ಡಾ.ಬಿ.ಕೆ.ಜ್ಞಾನಪ್ರಕಾಶ್ ಕಿಡಿ



**ತಿ.ನರಸೀಪುರ ಮಾ.20:–** ಅವೈಜ್ಞಾನಿಕವಾಗಿ ಜಾತಿ ಜನಗಣತಿಯನ್ನು ನಡೆಸಿ, ಅನ್ಯಾಯದ ಒಳ ಮೀಸಲಾತಿ ಜಾರಿಗೊಳಿಸುವ ಮೂಲಕ ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ಬಲಗೈ ಸಮುದಾಯವನ್ನು ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಮೂಲೆಗುಂಪು ಮಾಡಲು ಷಡ್ಯಂತ್ರ ರೂಪಿಸಲಾಗಿದೆ ಎಂದು ಮೈಸೂರು ವಿಶ್ವ ವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ಬಿ.ಕೆ.ಜ್ಞಾನಪ್ರಕಾಶ್ ಗಂಭೀರ ಆರೋಪವನ್ನು ಮಾಡಿದರು.

ರಾಜ್ಯ ಬಲಗೈ ಜಾತಿಗಳ ಒಕ್ಕೂಟ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಮಾ.25 ರಂದು ಒಳಮೀಸಲಾತಿಗೆ ನ್ಯಾ. ನಾಗಮೋಹನ್ ದಾಸ್ ಆಯೋಗ ನೀಡಿರುವ ವರದಿಯನ್ನು ತಿರಸ್ಕರಿಸುವಂತೆ ಆಗ್ರಹಿಸಿ ಆಯೋಜಿಸಿರುವ ಬೃಹತ್ ಪ್ರತಿಭಟನೆಯ ಪೂರ್ವಭಾವಿಯಾಗಿ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಸೋಮವಾರ ಕರೆಯಲಾಗಿದ್ದ ಸಭೆಯಲ್ಲಿ ಮಾತನಾಡಿದ ಅವರು ಬಲಗೈ(ಹೊಲಯ) ಸಮುದಾಯವನ್ನು ತುಳಿಯುವ ಹುನ್ನಾರಕ್ಕೆ ನ್ಯಾ. ನಾಗಮೋಹನದಾಸ್ ಶಾಮೀಲಾಗಿದ್ದಾರೆ ಎಂದು ದೂರಿದರು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲು, ಸಿದ್ದರಾಮಯ್ಯ ಸಿಎಂ ಆಗಲು ಪ.ಜಾತಿಗಳು ಶೇ.90 ರಷ್ಟು ಮತವನ್ನು ನೀಡಿದ್ದರೆ, ಬಲಗೈ ಸಮುದಾಯ ಶೇ.80 ರಷ್ಟು ಮತವನ್ನು ಕೊಟ್ಟಿದೆ. ಚಾಮುಂಡೇಶ್ವರಿ ಕ್ಷೇತ್ರದ ಉಪಚುನಾವಣೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಮತ್ತು ವಿ ಶ್ರೀನಿವಾಸ ಪ್ರಸಾದ್ ಅವರು ಇಲ್ಲದಿದ್ದರೆ ಅಂದೇ ಸಿದ್ದರಾಮಯ್ಯ ಮೂಲೆಗುಂಪಾಗಿ ಬಿಡುತ್ತಿದ್ದರು. ಎರಡೂ ಬಾರಿಯೂ ವಿಪಕ್ಷ ನಾಯಕ ಹಾಗೂ ಸಿಎಂ ಆಗುವ ಅವಕಾಶವನ್ನು ಬಿಟ್ಟಿಕೊಟ್ಟಿದ್ದೇವೆ. ಅವರ ರಾಜಕೀಯ ಬೆಳವಣಿಗೆಗೆ ಕಾರಣವಾದ ಸಮುದಾಯಕಕ್ಕೆ ಒಳ ಮೀಸಲಾತಿಯಲ್ಲಿ ಶೈಕ್ಷಣಿಕ ಮತ್ತು ಉದ್ಯೋಗ ಮೀಸಲಾತಿಯಲ್ಲಿ ವಂಚಿಸುತ್ತಿರುವ ಕ್ರಮ ದ್ರೋಹದ ಕೆಲಸವಾಗಿದೆ. ಸರ್ಕಾರದ ಅನ್ಯಾಯವನ್ನು ಖಂಡಿಸಿ ಮಾರ್ಚ್ 25ರಂದು ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ. 2 ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಲಿದ್ದು, ತಾಲೂಕಿನಿಂದ 5 ಸಾವಿರ ಜನರು ಆಗಮಿಸಬೇಕೆಂದು ಡಾ.ಬಿ.ಕೆ.ಜ್ಞಾನಪ್ರಕಾಶ್ ಮನವಿ ಮಾಡಿದರು.

ಹಿರಿಯ ಮುಖಂಡ ಸೋಸಲೆ ಮಹದೇವಸ್ವಾಮಿ ಮಾತನಾಡಿ, ಸತತವಾಗಿ ಸಮಾಜ ಕಲ್ಯಾಣ ಇಲಾಖೆಯ ಖಾತೆಯನ್ನು ಮಾದಿಗ ಸಮುದಾಯದ ಘಟಾನುಘಟಿ ರಾಜಕಾರಣಿಗಳು ನಿರ್ವಹಿಸಿದ್ದಾರೆ. ಈಗಿನ ಸರಕಾರದಲ್ಲಿ ಅವರೇ ಇದ್ದಿದ್ದರೆ ಬಲಗೈ ಸಂಬಂಧಿತ ಜಾತಿಗಳನ್ನು ಸಂಪೂರ್ಣವಾಗಿ ಮೀಸಲಾತಿಯಿಂದ ದೂರ ಇಟ್ಟಿರುತ್ತಿದ್ದರು. ಆದರೆ ಡಾ. ಎಚ್ ಸಿ ಮಾದೇವಪ್ಪ ಅವರು ಇದಕ್ಕೆಲ್ಲ ಅವಕಾಶ ಕೊಟ್ಟಿಲ್ಲ. ಪರಿಶಿಷ್ಟ ಜಾತಿಯ ಎಲ್ಲಾ ಸಮುದಾಯಗಳಿವೆ ಸಾಮಾಜಿಕ ನ್ಯಾಯ ಕಲ್ಪಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಅದಾಗಿಯೂ ಸಮುದಾಯಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ದೊಡ್ಡ ಮಟ್ಟದಲ್ಲಿ ಧ್ವನಿ ಎತ್ತಲು ಪ್ರತಿಯೊಬ್ಬರು ಬೆಂಗಳೂರಿನ ಹೋರಾಟದಲ್ಲಿ ಭಾಗವಹಿಸಬೇಕೆಂದು ಕರೆ ನೀಡಿದರು.

ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ಒಳ ಮೀಸಲಾತಿಯ ಜಾರಿಯಲ್ಲಿ ರಾಜ್ಯದ ಹೊಲಯ ಸಮುದಾಯಕ್ಕೆ ಅನ್ಯಾಯವಾಗಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಡುವುದಿಲ್ಲ ಎಂಬ ನಂಬಿಕೆ ಕೊನೆಗೂ ಹುಸಿಯಾಗಿದೆ. ಒಳ ಮೀಸಲು ಅನ್ವಯ ಶೈಕ್ಷಣಿಕ ಸವಲತ್ತು ಮತ್ತು ಉದ್ಯೋಗ ನೇಮಕಾತಿ ನಡೆದ್ದಲ್ಲಿ ಮಕ್ಕಳು ಹಾಗೂ ಯುವಕರ ಭವಿಷ್ಯ ಹಾಳಾಗಲಿದೆ. ಹಾಗಾಗಿ ಪ್ರಬಲವಾದ ಹೋರಾಟದ ಮೂಲಕ ರಾಜ್ಯ ಸರ್ಕಾರವನ್ನು ಎಚ್ಚರಿಸಬೇಕಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ತಾಲೂಕು ಮಟ್ಟದಲ್ಲಿ ಮೊದಲ ಹೋರಾಟಕ್ಕೆ ಬೆಂಬಲ ನೀಡದ ಮುಖಂಡರ ನಡವಳಿಕೆಯ ಬಗ್ಗೆ ಯುವ ಮುಖಂಡ ಸೋಸಲೇ ಎ.ಶಿವಕುಮಾರ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ವಿಚಾರವಾದಿ ಕೆ.ಎನ್. ಪ್ರಭುಸ್ವಾಮಿ, ದಲಿತ ಸಂಘರ್ಷ ಸಮಿತಿಯ ರಾಜ್ಯ ವಿಭಾಗೀಯ ಸಂಚಾಲಕ ಆಲಗೂಡು ಎಸ್. ಚಂದ್ರಶೇಖರ್ ಸೇರಿದಂತೆ ಹಲವರು ಮಾತನಾಡಿದರು. ಜಿ.ಪಂ ಮಾಜಿ ಎಸ್.ಎನ್.ಸಿದ್ದಾರ್ಥ, ಸೋಸಲೆ ಮಹದೇವಸ್ವಾಮಿ, ತಾ.ಪಂ ಮಾಜಿ ಸದಸ್ಯ ಕುಕ್ಕೂರು ಗಣೇಶ್, ಮಹಾಸಭಾ ಅಧ್ಯಕ್ಷ ಶಶಿಕಾಂತ್ ಸೋಸಲೆ, ಎಸ್.ನಂಜುಂಡಯ್ಯ, ಎಂ. ಪರಶಿವಮೂರ್ತಿ, ಗ್ರಾ.ಪಂ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಎಂ.ಎಸ್.ನಟರಾಜಮೂರ್ತಿ, ಡಿಜೆಎಸ್ ಜಿಲ್ಲಾಧ್ಯಕ್ಷ ತುಂಬಲ ಮಂಜುನಾಥ್, ಮುಖಂಡರಾದ ತುಂಬ್ಲ ಅಂದಾನಿ, ಡಿ.ಆರ್.ಮೂರ್ತಿ, ಕುಕ್ಕೂರೂ ಪ್ರಸನ್ನ, ಎಸ್.ಸಿ.ಗಣೇಶಸ್ವಾಮಿ, ಧರ್ಮರತ್ನಕುಮಾರ, ಆರ್.ಶಂಕರ್, ಡಿ.ಮಂಟೇಸ್ವಾಮಿ, ವಾಟಾಳು ನಾಗರಾಜು, ಕಲಿಯೂರು ಶಿವಣ್ಣ, ಮರಿಸ್ವಾಮಿ, ಕೆ.ಗಣೇಶ್, ಕೆಬ್ಬೆಹುಂಡಿ ನಿಂಗರಾಜು, ಉಕ್ಕಲಗೆರೆ ರಾಜು, ನೀಲಸೋಗೆ ಕುಮಾರ ಹಾಗೂ ಇನ್ನಿತರರು ಇದ್ದರು.

# ಎರಡು ಬಾರಿ ನೀರು ಸಂಸ್ಕರಣೆ ಸಚಿವ ಬೈರೇಗೌಡ ಸಮರ್ಥನೆಗೆ ಆಕ್ಷೇಪ

**ಕೋಲಾರ ,ಮಾ,20–** ಬಯಲು ಸೀಮೆಯ ಬರ ಪೀಡಿತ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಬೆಂಗಳೂರಿನ ತ್ಯಾಜ್ಯ ನೀರನ್ನು ಎರಡೂ ಬಾರಿ ಸಂಸ್ಕರಿಸಿ ಕೆರೆಗಳಿಗೆ ತುಂಬಿಸುತ್ತಿರುವುದರ ಕುರಿತು ಮುಳಬಾಗಿಲಿನ ಶಾಸಕ ಸಮೃದ್ದಿ ಮಂಜುನಾಥ್ ಅವರು ಸಂಸ್ಕರಣೆಯ ನೀರಿನಲ್ಲಿ ರಾಸಾಯಾನಿಕ ಅಂಶಗಳಿವೆ, ಮಣ್ಣು ಸಹ ಖನಿಜಾಂಶಗಳಿಂದ ಕೂಡಿದ್ದು ತರಕಾರಿ ಬೆಳೆಗಳು ವಿಷಕಾರಿ ಅಂಶಗಳಿಂದ ಕೊಡಿದೆ, ತ್ಯಾಜ್ಯ ನೀರನ್ನು ಮೂರು ಬಾರಿ ಸಂಸ್ಕರಿಸಬೇಕೆಂದು ಒತ್ತಾಯಿಸಿದಾಗ ಕೋಲಾರದ ತವರು ಜಿಲ್ಲೆಯ ಕಂದಾಯ ಸಚಿವ ಕೃಷ್ಣ ಬೈರೇಗೌಡರು ಎರಡು ಬಾರಿ ಸಂಸ್ಕರಿಸುತ್ತಿರುವ ನೀರಿನಿಂದ ಯಾವೂದೇ ಅಪಾಯುವಿಲ್ಲ ಎಂದು ಸಮರ್ಥಿಸಿ ಕೊಂಡಿರುವುದು ದುರದೃಷ್ಟಕರ ಸಂಗತಿಯಾಗಿದೆ ಎಂದು ಕೋಲಾರ ಚಿಕ್ಕಬಳ್ಳಾಪುರ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಅಂಜನೇಯ ರೆಡ್ಡಿ ವಿಷಾಧಿಸಿದರು.

ನಗರದ ಪತ್ರಕರ್ತರ ಭವನದಲ್ಲಿನ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ ಕಳೆದ 1996ರಲ್ಲಿ ಸಿ.ಬೈರೇಗೌಡರು ಸಚಿವರಾಗಿದ್ದರೂ ಅಗಿನ ಜಿಲ್ಲಾಧಿಕಾರಿ ಸಂಜಯ್ ದಾಸ್ ಗುಪ್ತ ಅವರುಗಳ ದೂರದೃಷ್ಟಿಯಿಂದ ಸದನದಲ್ಲಿ ರಾಜ್ಯದಲ್ಲಿಯೇ ಅತಿ ಹೆಚ್ಚು ಕೆರೆಗಳನ್ನು ಹೊಂದಿರುವ ಕೋಲಾರ ಜಿಲ್ಲೆಯಾಗಿದೆ. ಅದರೆ ಬರದ ಹಿನ್ನಲೆಯಲ್ಲಿ ಕೆರೆ ಕಾಲುವೆಗಳು ಬೆತ್ತಲಾಗಿವೆ ಈ ಜಿಲ್ಲೆಗೆ ಶಾಶ್ವತ ನೀರಾವರಿ ಯೋಜನೆಯನ್ನು ರೂಪಿಸುವುದು ಅನಿವಾರ್ಯವಾಗಿದೆಂ ಸೆಂದು ಕರೆ,ಕುಂಟೆಗಳಲ್ಲಿನ ಹೂಳನ್ನು ಎತ್ತಿಸಿ ಸ್ವಚ್ಛಗೊಳ ಸಿದ್ದರು ಅವರು ಇದ್ದಿದ್ದರೆ ಯಾವೂದಾದರೂ ನದಿ ನೀರನ್ನು ತರುತ್ತಿದ್ದರೇನೂ ಎಂದರು.
ಅದರೆ ಸಿ.ಬೈರೇಗೌಡರ ಪುತ್ರ ಕೃಷ್ಣ ಬೈರೇಗೌಡರಿಗೆ ರಾಜಕೀಯವಾಗಿ ಪ್ರವೇಶದ ಅವಕಾಶ ಕಲ್ಪಿಸಿದ ಜಿಲ್ಲೆಯೆಂಬ ಕನಿಷ್ಟ ಕಾಳಜಿಯು ಇಲ್ಲವಾಗಿ ಆತ್ಮವಂಚನೆಯ ಹೇಳಿಕೆಗಳನ್ನು



ಸದನದಲ್ಲಿ ನೀಡಿದ್ದು ದೌಭಾಗ್ಯದ ಪರಮಾವಧಿಯಾಗಿದೆ ಎಂದು ವಿಷಾದಿಸಿದರು.ಕಳೆದ 30 ವರ್ಷಗಳಿಂದ ಅನೇಕ ಹೋರಾಟಗಳನ್ನು ನಡೆಸಿ ಕೊಂಡು ಬಂದಿದ್ದೇವೆ. ಅದರೆ ಕೃಷ್ಣಬೈರೇಗೌಡರು ಯಾವೂದೇ ಹೋರಾಟದಲ್ಲಿ ಭಾಗಿಯಾಗಲಿಲ್ಲ ಜಿಲ್ಲೆಯ ಅಭಿವೃದ್ದಿಗೆ ಮುಂದಾಗಿಲ್ಲ. ಸದನದಲ್ಲಿ ಡಾ.ಪರಮಶಿವಯ್ಯ ವರದಿ, ಮೇಕೆದಾಟು. ಭದ್ರ ಮೇಲ್ದಂಡೆ ಯೋಜನೆ, ಯಾವೂದೇ ಚಕಾರ ಎತ್ತಲಿಲ್ಲ. ಎತ್ತಿನ ಹೊಳೆಯೆಂಬ ಅವೈಜ್ಞಾನಿಕ ಯೋಜನೆಯು ಎ.ಟಿ.ಎಂ. ಯೋಜನೆಯಾಗಿದ್ದು ವಂಚನೆಗಳ ಮಹಾಪೂರವೇ ಹರಿದಿದೆ. ಆಗಲೇ ಅನೇಕ ಪ್ರಜ್ಞಾವಂತರು ಈ ಯೋಜನೆಗೆ ವಿರೋಧ ವ್ಯಕ್ತ ಪಡೆಸಿದರೂ ಸರ್ಕಾರವು ಕೇಳದೆ ಗುತ್ತಿಗೆದಾರರಿಗೆ ಮಣೆ ಹಾಕಿದರು ಎಂದು ದೂರಿದರು.

24 ಟಿ.ಎಂ.ಸಿ. ಸಿಗುವುದಾಗಿ ತಪ್ಪು ಮಾಹಿತಿ ನೀಡಿ ದಾರಿ ತಪ್ಪಿಸಿದರು. ಕನಿಷ್ಟ 8 ಟಿ.ಎಂ.ಸಿ. ನೀರು ಪಡೆಯಲು ದುಬಾರಿ ವೆಚ್ಚವನ್ನು ಭರಿಸ ಬೇಕಾಗಿದೆ ಅಲ್ಲದೆ ಈ ಯೋಜನೆಯೂ ಯಶಸ್ವಿಯಾಗುವುದು ಸಂಶಯಾಸ್ಪದವಾಗಿದೆ. ಎರಡು ವರ್ಷದಲ್ಲಿ ಪೂರ್ಣಗೊಳಿಸುವುದಾಗಿ ಹೇಳಿದವರೂ 11–12 ವರ್ಷಗಳಿಂದ ಈ ಯೋಜನೆಯನ್ನು ಪೂರ್ಣಗೊಳಿಸಲು ಸಾಧ್ಯವಾಗಿಲ್ಲ ಒಂದು ಹನಿ ನೀರನ್ನು ಕಂಡಿಲ್ಲ ಎಂದು ಆರೋಪಿಸಿದರು.
ಕೆ.ಸಿ.ವ್ಯಾಲಿ.ಹೆಚ್.ಎನ್. ವ್ಯಾಲಿ ನೀರು ಸಂಸ್ಕರಣೆಯನ್ನು 6 ತಿಂಗಳ ನಂತರ 3 ಬಾರಿ ಸಂಸ್ಕರಿಸಿ ಹರಿಸಲಾಗುವುದು ಎಂದು ಅಗಲೇ ಪ್ರಧಾನಿಯಾಗಿದ್ದ ಮನಮೋಹನ್ ಸಿಂಗ್ ಅವರು ಸೂಚಿಸಿದ್ದರೂ ಸಹ ರಾಜ್ಯ ಸರ್ಕಾರ ಅವರ ಆದೇಶವನ್ನು ಕಸದ ಬುಟ್ಟಿಗೆ ಹಾಕಲಾಗಿದೆ. ಮಾಲಿನ್ಯ ನಿಯಂತ್ರ ಮಂಡಳಿ ಹಾಗೂ ನೀರಿನ ಸಂಶೋಧಕ ವಿಜ್ಞಾನದ ಸಂಸ್ಥೆಗಳು ಸಂಸ್ಕರಣೆ ನೀರು ಆರೋಗ್ಯ ಹಾನಿಕರ. ಪರಿಸರಕ್ಕೆ ಮಾರಕವಾಗಿದೆ ಎಂದು ಸೂಚಿಸಿದ್ದರೂ ಸಹ ತಿರಸ್ಕರಿಸಿ ರುವುದರ ಫಲವಾಗಿ ಇಂದು ವಾಯು. ನೀರು, ಮಣ್ಣು ಸೇರಿದಂತೆ ಪರಿಸರವೇ ಹಾಳಾಗಿದ್ದು ಮುಂದಿನ ದಿನಗಳಲ್ಲಿ ಅರೋಗ್ಯದ ಮೇಲೆ ಬಾರಿ ಪರಿಣಾಮ ಬೀರಲಿದೆ ಎಂದು ಕಳವಳ ವ್ಯಕ್ತ ಪಡೆಸಿದರೂ ಸಹ ಕೃಷ್ಣ ಬೈರೇಗೌಡರು ಚಕಾರ ಎತ್ತಲಿಲ್ಲ. ಎಂದು ಬೇಸರ ವ್ಯಕ್ತಪಡಿಸಿದರು.

ಈಗಾ ಎರಡು ಹಂತದ ಸಂಸ್ಕರಣೆಯಿಂದ ಅಂತರ್ಜಲ ಅಭಿವೃದ್ಧಿಯಾಗಲಿದೆ ಎಂದು ಸಮರ್ಥಿಸಿ ಕೊಳ್ಳಲು ಮುಂದಾಗಿದ್ದಾರೆ ಆಗಾ ಇದರ ಬಗ್ಗೆ ಮಾಜಿ ಶಾಸಕರಾಗಿದ್ದ ಶ್ರೀನಿವಾಸಗೌಡರು ಸಹ ನೀರನ್ನು ಕುಡಿದು ಎಲ್ಲರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡಿದರೂ ಅದೇ ವೇಳೆಗೆ ಜಿಲ್ಲೆಯ ಭಾಗೀರಥ ಎನಿಸಿ ಕೊಂಡವರು ನಮಗೆ ನದಿ ನೀರು ಕೊಡದಿದ್ದರೂ ತ್ಯಾಜ್ಯ ನೀರನ್ನು ಸಂಸ್ಕರಿಸಿ ನೀಡಿ ಎಂದು ಹೇಳಿದ್ದನ್ನು ಮುಂದು ಮಾಡಿ ಕೊಂಡು ಸಂಸ್ಕರಿಸಿದ ನೀರನ್ನು ಕೆರೆಗಳಿಗೆ ಹರಿಸಿ ಇಡೀ ಕೃಷಿಯನ್ನು ಅವಸಾನದ ಅಂಚಿಗೆ ಕೊಂಡೊಯ್ದುದಿದ್ದಾರೆ ಎಂದು ಕಳವಳ ವ್ಯಕ್ತ ಪಡೆಸಿದರು. ಸಮೃದ್ದಿ ಮಂಜುನಾಥ್ ಅವರ ಆರೋಪಗಳ ಬಗ್ಗೆ ಧ್ವನಿಗೊಡಿಸಿ ಜಿಲ್ಲೆಗೆ ಶುದ್ದವಾದ ನೀರನ್ನು ಹರಿಸಲು 3ನೇ ಹಂತದ ಸಂಸ್ಕರಣೆ ಮಾಡಲು ಧ್ವನಿ ಎತ್ತ ಬೇಕಾದ ಕೃಷ್ಣ ಅವರು ವಿರುದ್ದವಾಗಿ ಸಚಿವ ಎಂಸಿ, ಸುಧಾಕರ್ ಅವರೊಂದಿಗೆ ಎರಡು ಹಂತದ ಸಂಸ್ಕರಣೆ ಸಾಕು ಎಂದು ಪ್ರತಿಪಾದಿಸಿರುವುದು ಎಷ್ಟು ಮಾತ್ರ ಸಮಾಂಜಸವಾಗಿದೆ. ಈ ವಿಷಯದ ಬಗ್ಗೆ ನೀರಾವರಿ ಸಚಿವರು, ಮುಖ್ಯ ಮಂತ್ರಿಗಳು ಉತ್ತರಿಸ ಬೇಕಾಗಿತ್ತು ಅದರೆ ಕೃಷಿ ಸಚಿವ ಕೃಷ್ಣ ಬೈರೇಗೌಡರು ಎರಡು ಹಂತದ ಸಂಸ್ಕರಣೆ ಸಾಕು ಎಂದು ಸಮರ್ಥಿಸಿ ಸರ್ಕಾರದ ದಿಕ್ಕು ತಪ್ಪಿಸಿ ಕೋಲಾರ ಜಿಲ್ಲೆಯ ಜನತೆಗೆ ಶುದ್ದ ನೀರು ಹರಿಸುವಲ್ಲಿ ವಂಚಿಸಿದ್ದಾರೆ. ಅವರ ಮನೆ ಕೆ.ಸಿ. ವ್ಯಾಲಿ ನೀರನ್ನೆ ಬಳಿಸಿ ಕೊಳ್ಳಲಿ ನಾವೇ ಪೂರೈಕೆ ಮಾಡುತ್ತೇವೆಂದು ಕಿಡಿ ಕಾರಿದರು.ಸಂಚಾಲಕ ರಾಜೇಶ್ ಅವರು ವಿಷಯುವನ್ನು ಪ್ರಸಾಪಿಸಿ ಮಾತನಾಡಿ ದರು.ಪ'ತ್ರಿಕಾಗೋಷ್ಠಿಯಲ್ಲಿ ಕೆ.ಆರ್.ಎಸ್.ನ ರಾಮಕೃಷ್ಣ, ರಾಘವರೆಡ್ಡಿ, ಶ್ರೀನಿವಾಸ್, ಪದ್ಮವತಿ ಪ್ರಭಾಕರ್ ಉಪಸ್ಥಿತರಿದ್ದರು

**Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.**
**Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE**